# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಮಂಗಳವಾರ, ಆಗಸ್ಟ್ 09, 2022

ಸಂಪುಟ : 49 ಸಂಚಿಕೆ : 87 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಕಾಮನ್‌ವೆಲ್ತ್‌ನಲ್ಲಿ ಭಾರತಕ್ಕೆ 4ನೇ ಸ್ಥಾನ

ಬರ್ಮಿಂಗ್‌ಹ್ಯಾಮ್, ಆ. 8 – ಭಾರತದ ಬ್ಯಾಡ್ಮಿಂಟನ್ ಆಟಗಾರರೂ ಸೇರಿದಂತೆ ಹಲವಾರು ವಲಯಗಳ ಕ್ರೀಡಾಪಟುಗಳ ಸಾಧನೆಯಿಂದಾಗಿ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತ 22 ಬಂಗಾರದ ಪದಕಗಳೊಂದಿಗೆ ನಾಲ್ಕನೇ ಸ್ಥಾನಕ್ಕೆ ತಲುಪಿದೆ.

ಕ್ರೀಡಾಕೂಟದ ಕೊನೆಯ ದಿನದಂದು ಬ್ಯಾಡ್ಮಿಂಟನ್ ವಿಭಾಗದ ಮೂರು ಬಂಗಾರದ ಪದಕಗಳನ್ನು ಭಾರತ ಗೆದ್ದಿದೆ. ಪಿ.ವಿ. ಸಿಂಧು, ಲಕ್ಷ್ಯ ಸೇನ್ ಹಾಗೂ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್‌ಸೈರಾಜ್ ರಂಕಿರೆಡ್ಡಿ ಅವರ ಜೋಡಿ ಬಂಗಾರ ತಂದಿದೆ. ಪಂದ್ಯಾವಳಿಯಲ್ಲಿ ಭಾರತ ಒಟ್ಟಾರೆ 61 ಪದಕ ಗಳಿಸಿದೆ.

2018ರ ಪಂದ್ಯಾವಳಿಗೆ ಹೋಲಿಸಿದರೆ ಭಾರತ ಪಡೆದ ಬಂಗಾರದ ಪದಕಗಳ ಸಂಖ್ಯೆ 4 ಕಡಿಮೆಯಾಗಿದೆ. ಆದರೆ, ಈ ಬಾರಿ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಶೂಟಿಂಗ್ ಸ್ಪರ್ಧೆ ಇರಲಿಲ್ಲ. ಭಾರತ ಕಳೆದ ಬಾರಿ ಶೂಟಿಂಗ್ ಒಂದರಲ್ಲೇ (4ನೇ ಪುಟಕ್ಕೆ)

# ಸಾರ್ವಜನಿಕ ಗಣೇಶೋತ್ಸವಕ್ಕೆ ಸರ್ಕಾರದಿಂದ ಹಸಿರು ನಿಶಾನೆ

**ಸಾರ್ವಜನಿಕ ಸಮಾರಂಭಗಳಿಗೆ ಇದ್ದ ನಿರ್ಬಂಧಗಳು ಸಂಪೂರ್ಣ ತೆರವು**

ಬೆಂಗಳೂರು, ಆ. 8 - ಪರಿಸರ ಸ್ನೇಹಿ ಗಣೇಶ ವಿಗ್ರಹಗಳನ್ನು ಗಲ್ಲಿ ಗಲ್ಲಿಗಳಲ್ಲಿ ಕೂರಿಸಿ, ಪೂಜೆ ನಡೆಸಲು ರಾಜ್ಯ ಸರ್ಕಾರ ಹಸಿರು ನಿಶಾನೆ ತೋರಿದೆ.

ಕೋವಿಡ್-19 ಕಾರಣಾಂತರದಿಂದ ಸಾರ್ವಜನಿಕವಾಗಿ ಗಣೇಶೋತ್ಸವ ಸೇರಿದಂತೆ ಇತರೆ ಸಮಾರಂಭಗಳ ಆಚರಣೆಗೆ ಇದ್ದ ನಿರ್ಬಂಧವನ್ನು ಹಿಂತೆಗೆದುಕೊಳ್ಳಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಸಂಪುಟದ ಹಿರಿಯ ಸಹೋದ್ಯೋಗಿಗಳು ಹಾಗೂ ಅಧಿಕಾರಿಗಳೊಟ್ಟಿಗೆ ಸಮಾಲೋಚನೆ ನಡೆಸಿದ ನಂತರ ಇಂತಹ ತೀರ್ಮಾನಕ್ಕೆ ಬಂದಿದ್ದಾರೆ.

ಕೋವಿಡ್-19 ಕಾರಣದಿಂದ ಒಂದು ವರ್ಷ ಗಣೇಶೋತ್ಸವ ಹಾದಿ ಬೀದಿಯಲ್ಲಿ ಆಚರಿಸಲು ಸಂಪೂರ್ಣ ನಿರ್ಬಂಧ ಹೇರಲಾಗಿತ್ತು. ಕಳೆದ ವರ್ಷ ಹಿಂದೂ ಸಂಘಟನೆಗಳ ಒತ್ತಡಕ್ಕೆ ಮಣಿದು, ವಾರ್ಡ್‌ಗೆ ಒಂದು ಗಣೇಶೋತ್ಸವ ಆಚರಣೆಗೆ ಅನುಮತಿ ನೀಡಲಾಗಿತ್ತು.

ಮುಂಬರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಹಿಂದೂ ಸಂಘಟನೆಗಳನ್ನು ಮತ್ತಷ್ಟು ಗಟ್ಟಿಗೊಳಿಸಲು ಗಣೇಶೋತ್ಸವಕ್ಕೆ ಇದ್ದ ನಿರ್ಬಂಧವನ್ನು ಪೂರ್ಣವಾಗಿ ಸಡಿಲಿಕೆ ಮಾಡಲಾಗಿದೆ ಎನ್ನಲಾಗಿದೆ. ಕರ್ನಾಟಕ ಸೇರಿದಂತೆ ಹತ್ತು ರಾಜ್ಯಗಳಲ್ಲಿ ಕೋವಿಡ್-19 ಪ್ರಮಾಣ ಹೆಚ್ಚಳವಾಗಿದೆ. ಅದರಲ್ಲೂ ರಾಷ್ಟ್ರದ ಸರಾಸರಿಯಲ್ಲಿ ಕರ್ನಾಟಕದ್ದೇ ಶೇಕಡ 10 ರಷ್ಟು ಪಾಲು, ಈ ಬಗ್ಗೆ ಎಚ್ಚರ ವಹಿಸುವಂತೆ ಕೇಂದ್ರ ಆರೋಗ್ಯ ಇಲಾಖೆ ರಾಜ್ಯಕ್ಕೆ ಎಚ್ಚರಿಕೆ ನೀಡಿದ್ದರೂ, ಇದನ್ನು ಗಣನೆಗೆ ತೆಗೆದುಕೊಳ್ಳದೆ, ಸಾರ್ವಜನಿಕ ಸಮಾರಂಭಗಳಿಗಿದ್ದ ನಿರ್ಬಂಧ ವನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ಖಚಿತಪಡಿಸಿದ ಕಂದಾಯ ಸಚಿವ ಆರ್. ಅಶೋಕ್, ತಾವು (2ನೇ ಪುಟಕ್ಕೆ)

## ಪ್ರವಾಹದಿಂದ ರಾಜ್ಯದಲ್ಲಿ 73 ಸಾವು

ಬೆಂಗಳೂರು, ಆ. 8 – ರಾಜ್ಯದಲ್ಲಿ ಮಳೆ ಹಾಗೂ ಪ್ರವಾಹದ ಘಟನೆಗಳಿಂದಾಗಿ 73 ಜನ ಸಾವನ್ನಪ್ಪಿದ್ದಾರೆ ಹಾಗೂ 7,386 ಜನ ರಾಜ್ಯದ 75 ಕಾಳಜಿ ಕೇಂದ್ರಗಲ್ಲಿ ಆಶ್ರಯ ಪಡೆದಿದ್ದಾರೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದ್ದಾರೆ. 14 ಜಿಲ್ಲೆಗಳ 161 ಹಳ್ಳಿಗಳಲ್ಲಿ ಪ್ರವಾಹದಿಂದ ತೀವ್ರ ಸಮಸ್ಯೆಯಾಗಿದೆ. ಇತ್ತೀಚಿನ ದಿನಗಳಲ್ಲಿ 21,727 ಜನ ಪ್ರವಾಹ ಪೀಡಿತರಾಗಿದ್ದಾರೆ.

ಕಳೆದ ಜೂನ್ 1ರ ನಂತರ 15 ಜನರು ಸಿಡಿಲು ಬಡಿದು, ಮರ ಬಿದ್ದು ಐವರು, ಮನೆ ಕುಸಿದು 19 ಜನ, ನದಿಗಳಲ್ಲಿ ಸಿಲುಕಿ 24 ಜನ, ಭೂಕುಸಿತಕ್ಕೆ ಸಿಲುಕಿ ಒಂಭತ್ತು ಹಾಗೂ ವಿದ್ಯುತ್ ಆಘಾತಕ್ಕೆ ಸಿಲುಕಿ ಒಬ್ಬರು ಸಾವನ್ನಪ್ಪಿದ್ದಾರೆ ಎಂದು ಸಚಿವರು ಹೇಳಿದ್ದಾರೆ.






## ಮಾನವ ಹಕ್ಕು ಆಯೋಗದ ಡಿವೈಎಸ್ಪಿಯಾಗಿ ಸುಧೀರ್



ದಾವಣಗೆರೆ, ಆ. 8- ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗದ ಉಪಾಧೀಕ್ಷಕರಾಗಿ ಸುಧೀರ್ ಹೆಗಡೆ ಅವರು ಇಂದು ಅಧಿಕಾರ ವಹಿಸಿಕೊಂಡರು.

ಉಪಾಧೀಕ್ಷಕರ ಹುದ್ದೆಯು ಕರ್ನಾಟಕ ರಾಜ್ಯ ವ್ಯಾಪ್ತಿಯನ್ನೊಳಗೊಂಡಿದ್ದು, ರಾಜ್ಯದ ಯಾವುದೇ ಭಾಗದಲ್ಲಿ ಮಾನವ ಹಕ್ಕು ಉಲ್ಲಂಘನೆಯಾದಲ್ಲಿ ಅದರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವ ಅಧಿಕಾರ ಈ ಹುದ್ದೆ ಹೊಂದಿದೆ. ಸುಧೀರ್ ಹೆಗಡೆ ಅವರು ಈ ಹಿಂದೆ ಸುಮಾರು 6 ವರ್ಷಗಳ ಕಾಲ ದಾವಣಗೆರೆ ಲೋಕಾಯುಕ್ತ ಇನ್‌ಸ್ಪೆಕ್ಟರ್ ಆಗಿ ಸೇವೆ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

## ಎಂಟನೇ ವೇತನ ಆಯೋಗದ ರಚನೆಗೆ ಪರಿಶೀಲಿಸುತ್ತಿಲ್ಲ : ಕೇಂದ್ರ

ನವದೆಹಲಿ, ಆ. 8 – ಕೇಂದ್ರ ಸರ್ಕಾರದ ನೌಕರರಿಗೆ ಎಂಟನೇ ವೇತನ ಆಯೋಗ ರಚಿಸಲು ಪರಿಶೀಲಿಸುತ್ತಿಲ್ಲ ಎಂದು ಕೇಂದ್ರ ಹಣಕಾಸು ಖಾತೆ ಅಧೀನ ಸಚಿವ ಪಂಕಜ್ ಚೌಧರಿ ಲೋಕಸಭೆಗೆ ತಿಳಿಸಿದ್ದಾರೆ. ಜನವರಿ 1, 2026ರಿಂದ ಕೇಂದ್ರ ಸರ್ಕಾರಿ ನೌಕರರಿಗೆ ಹೊಸ ವೇತನ ದೊರೆಯುವಂತಾಗಲು ವೇತನ ಆಯೋಗ ರಚಿಸಲಾಗುವುದೇ ಎಂಬ ಪ್ರಶ್ನೆಗೆ ಚೌಧರಿ ಈ ಉತ್ತರ ನೀಡಿದ್ದಾರೆ. ಕೇಂದ್ರ ಸರ್ಕಾರ 2014ರ ಫೆಬ್ರವರಿಯಲ್ಲಿ 7ನೇ ವೇತನ ಆಯೋಗ ರಚಿಸಿತ್ತು. ಅದರ ವರದಿಯನ್ನು ಜನವರಿ 1, 2016ರಿಂದ ಜಾರಿಗೆ ತರಲಾಗಿತ್ತು.

## ಹೊಸ ಐ.ಐ.ಟಿ. ಯೋಜನೆ ಇಲ್ಲ : ಕೇಂದ್ರ


ನವದೆಹಲಿ, ಆ. 8 – ದೇಶದಲ್ಲಿ ಹೊಸ ಐ.ಐ.ಟಿ. ಸ್ಥಾಪಿಸುವ ಯೋಜನೆ ಇಲ್ಲ ಎಂದು ಕೇಂದ್ರ ಶಿಕ್ಷಣ ಸಚಿವಾಲಯ ತಿಳಿಸಿದೆ. ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿರುವ ಶಿಕ್ಷಣ ಖಾತೆ ಅಧೀನ ಸಚಿವ ಸುಭಾಷ್ ಸರ್ಕಾರ, ಪ್ರಸಕ್ತ ಯಾವುದೇ ಐ.ಐ.ಟಿ. ಸ್ಥಾಪಿಸುವ ಯೋಜನೆ ಇಲ್ಲ ಎಂದಿದ್ದಾರೆ.

## ಬಾಂಗ್ಲಾದಲ್ಲಿ ಇಂಧನ ಬೆಲೆ ಶೇ.52ರ ಏರಿಕೆ

**ದೇಶಾದ್ಯಂತ ಭುಗಿಲೆದ್ದ ಪ್ರತಿಭಟನೆ**

ಢಾಕಾ, ಆ. 8 – ಶ್ರೀಲಂಕಾದಲ್ಲಿ ಆರ್ಥಿಕ ಸಮಸ್ಯೆ ತೀವ್ರವಾಗಿ ಭುಗಿಲೆದ್ದ ನಂತರ, ಬಾಂಗ್ಲಾ ದೇಶದಲ್ಲೂ ಸಮಸ್ಯೆಗಳು ತಲೆದೋರುತ್ತಿವೆ. ಬಾಂಗ್ಲಾದಲ್ಲಿ ಇಂಧನದ ಬೆಲೆಯನ್ನು ಶೇ.52ರವರೆಗೆ ಹೆಚ್ಚಿಸಲಾಗಿದ್ದು, ಪ್ರತಿಭಟನೆಗಳು ಆರಂಭವಾಗಿವೆ. ಬಾಂಗ್ಲಾ ಸ್ವಾತಂತ್ರ್ಯ ಪಡೆದ ನಂತರ ಇಂಧನ ಬೆಲೆ ಇಷ್ಟೊಂದು ಏರಿಸಿರುವುದು ಇದೇ ಮೊದಲು.

ದೇಶಾದ್ಯಂತ ಇರುವ ಪೆಟ್ರೋಲ್ ಪಂಪ್‌ಗಳಿಗೆ ಮುತ್ತಿಗೆ ಹಾಕಿರುವ ಪ್ರತಿಭಟನಾಕಾರರು, (4ನೇ ಪುಟಕ್ಕೆ)

# ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಫ್ಲೆಕ್ಸ್ ನಿಯಂತ್ರಣ



## ಹರಿಹರ ಪೌರಾಯುಕ್ತ ಐಗೂರು ಬಸವರಾಜ್

ಹರಿಹರ, ಆ. 8 - ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡ ಆಡಳಿತ ವ್ಯವಸ್ಥೆ ಇರುವುದರಿಂದ ಎಲ್ಲರನ್ನೂ ವಿಶ್ವಾಸ ತೆಗೆದುಕೊಂಡು ಫ್ಲೆಕ್ಸ್ ಹಾವಳಿ ನಿಯಂತ್ರಣಕ್ಕೆ ತರುವ ಪ್ರಯತ್ನ ಮಾಡಲಾಗುತ್ತದೆ ಎಂದು ಪೌರಾಯುಕ್ತ ಐಗೂರು ಬಸವರಾಜ್ ಹೇಳಿದರು.

ನಗರಸಭೆ ಸಭಾಂಗಣದಲ್ಲಿ ನಗರದಲ್ಲಿ ಫ್ಲೆಕ್ಸ್ ಹಾವಳಿ ತಡೆಯಲು ನಡೆದ ಮಹತ್ವದ ಸಭೆಯಲ್ಲಿ ಅವರು ಮಾತನಾಡಿದರು. ನಾವು ಸ್ವಾಭಿಮಾನ ಬಿಟ್ಟು ಕರ್ತವ್ಯ ಮಾಡೋಲ್ಲ ಮತ್ತು ರಾಜಕೀಯ ಪ್ರಭಾವವನ್ನು ಬೀರುತ್ತಾರೆ ಎಂದು ವರ್ಗಾವಣೆಗೆ ಹೆದರುವ ವ್ಯಕ್ತಿ ನಾನಲ್ಲ. ನನಗೆ ಕಾನೂನು ಚೌಕಟ್ಟಿನ ಅಡಿಯಲ್ಲಿ ಸರ್ಕಾರದ ಮಾನದಂಡಗಳ ಪಾಲನೆ ಮಾಡುವುದಕ್ಕಾಗಿ ಎಷ್ಟೇ ಅಡೆತಡೆಗಳನ್ನು ಎದುರಿಸಲು ಸಿದ್ಧ. ಸಾರ್ವಜನಿಕರೂ ಸಹ ಸರ್ಕಾರದ ಮಾನದಂಡಗಳನ್ನು ಸರಿಯಾದ ರೀತಿಯಲ್ಲಿ ಪಾಲನೆ ಮಾಡಬೇಕು ಎಂದರು.

ನಗರದಲ್ಲಿ ಹಾಕುತ್ತಿರುವ ಫ್ಲೆಕ್ಸ್‌ನಿಂದ ಇಲ್ಲಿಯವರೆಗೆ 44 ಸಾವಿರ ರೂ. ವಸೂಲಿ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಫ್ಲೆಕ್ಸ್ ಹಾಕುವುದಕ್ಕೆ ಆದೇಶ ಪಡೆದುಕೊಳ್ಳುವುದರ ಜೊತೆಗೆ, ಸರ್ಕಾರದ ಮಾನದಂಡಗಳ ಉಲ್ಲಂಘನೆಯಾದರೆ ಅಂತ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲು ಮಾಡಲಾಗುವುದು. ನಗರಸಭೆ ಆಡಳಿತ ಮಂಡಳಿಯ ಸದಸ್ಯರ ಸಭೆಯ ಗಮನಕ್ಕೆ ತಂದು ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ನಗರಸಭೆ ಉಪಾಧ್ಯಕ್ಷ ಎ. ವಾಮನಮೂರ್ತಿ ಮಾತನಾಡಿ, ನಗರದಲ್ಲಿ ಹಂದಿ, ನಾಯಿ ಮತ್ತು ಫ್ಲೆಕ್ಸ್ ಹಾವಳಿ ವಿಚಾರಕ್ಕೆ ಸುಮಾರು 10 ಸಭೆಗಳಲ್ಲಿ ಚರ್ಚೆ ಮಾಡಿದರೂ ಇದುವರೆಗೂ ಯಾವುದೇ ರೀತಿಯ ಪ್ರಯೋಜನ ಆಗಿರುವುದಿಲ್ಲ. ಇಲ್ಲಿನ ಮೂರೂ ಪಕ್ಷದವರ ಒತ್ತಡ ಇದಕ್ಕೆ ಕಾರಣ ಎಂದರು.

ನಗರದಲ್ಲಿ ಹಂದಿ ಮತ್ತು ಬಿಡಾಡಿ ದನಗಳ ಹಾವಳಿ ಹೆಚ್ಚಾಗಿದೆ. ಅಧಿಕಾರಿಗಳು ಫ್ಲೆಕ್ಸ್ ನಿಯಂತ್ರಿಸಲು ಕ್ರಮ ತೆಗೆದುಕೊಳ್ಳಬೇಕು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ಶಾಹೀನಾಬಾನು ದಾದಾಪೀರ್, ನಗರಸಭೆ ಸದಸ್ಯರಾದ ಹನುಮಂತಪ್ಪ, ಸುಮಿತ್ರ, ರಾಘವೇಂದ್ರ, ಆರೋಗ್ಯ ಇಲಾಖೆಯ ಗುರುಪ್ರಸಾದ್, ರವಿ ಪ್ರಕಾಶ್ ಮತ್ತಿತರರು ಹಾಜರಿದ್ದರು.

# ಜನರ ಬಳಿ ಹಣಕ್ಕೆ ಬೇಡಿಕೆ ಇಟ್ಟರೆ ಸಹಿಸಲ್ಲ

## ಅಧಿಕಾರಿಗಳಿಗೆ ಶಾಸಕ ಎಂ.ಪಿ.ರೇಣುಕಾಚಾರ್ಯ ಖಡಕ್ ಎಚ್ಚರಿಕೆ



ನ್ಯಾಮತಿ,ಆ.8- ರೈತರು ಹಾಗೂ ಸಾರ್ವಜನಿಕರು ಸಂಕಷ್ಟದಲ್ಲಿರುವ ಸಮಯದಲ್ಲಿ ಅಧಿಕಾರಿಗಳು ಅವರ ಬಳಿ ಹಣಕ್ಕೆ ಬೇಡಿಕೆ ಇಟ್ಟರೆ ನಾನು ಅದನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲವೆಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು.

ತಾಲೂಕಿನ ವಿವಿಧ ಗ್ರಾಮಗಳಿಗೆ ಅಧಿಕಾರಿಗಳು ಹಾಗೂ ಗ್ರಾಮಸ್ಥರೊಂದಿಗೆ ಭೇಟಿ ನೀಡಿ ಮಳೆ ಹಾನಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನಲ್ಲಿ ವಾಡಿಕೆಗಿಂತ ನಾಲ್ಕು ಪಟ್ಟು ಹೆಚ್ಚು ಮಳೆಯಾಗಿದ್ದು, ಅತಿಯಾದ ಮಳೆಯಿಂದಾಗಿ ರೈತರ ಬದುಕೇ ಮೂರಾಬಟ್ಟೆಯಾಗಿದೆ ಎಂದ ಶಾಸಕರು, ವರುಣ ದೇವ ರೈತರ ಪಾಲಿಗೆ ಶಾಪವಾಗಿ ಪರಿಣಮಿಸಿದ್ದಾನೆಂದು ಬೇಸರ ವ್ಯಕ್ತ ಪಡಿಸಿದರು.

ನಮ್ಮ ಸರ್ಕಾರ ರೈತರು ಹಾಗೂ ಸಾರ್ವಜನಿಕರು ಸಂಕಷ್ಟದಲ್ಲಿರುವ ಸಂದರ್ಭದಲ್ಲಿ ಅವರ ಕಣ್ಣೀರು ಒರೆಸುವ ಕೆಲಸವನ್ನು ಮಾಡುತ್ತಿದೆ ಎಂದ ಶಾಸಕರು, ಬೆಳೆ ಹಾನಿ, ಮನೆ ಹಾನಿಗೊಳಗಾದವರಿಗೆ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವ ಭರವಸೆಯನ್ನು ಶಾಸಕರು ನೀಡಿದರು.

ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನಲ್ಲಿ ಸಾಕಷ್ಟು ಮನೆ ಹಾನಿ, ಬೆಳೆಹಾನಿ, ರಸ್ತೆ, ಸೇತುವೆ, ಶಾಲಾ ಕಟ್ಟಡಗಳಿಗೆ ಹಾನಿಯಾಗಿದ್ದು ಈ ಬಗ್ಗೆ ಅಧಿಕಾರಿಗಳಿಗೆ ಸಮಗ್ರ ವರದಿ ಸಿದ್ದ ಪಡಿಸಲು ಸೂಚಿಸಿದ್ದಾರೆ.

ಈಗಾಗಲೇ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಅವಳಿ ತಾಲ್ಲೂಕನ್ನು ಅತಿವೃಷ್ಟಿ ಪೀಡಿತ ತಾಲ್ಲೂಕು ಎಂದು ಘೋಷಣೆ ಮಾಡುವುದರ ಜೊತೆಗೆ, ಅತಿ ಹೆಚ್ಚು ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದು, ಇದಕ್ಕೆ ಸಿಎಂ ಕೂಡ ಸಕಾರಾತ್ಮವಾಗಿ ಸ್ಪಂದಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ರೇಣುಕಾ, ಕೃಷಿ ಅಧಿಕಾರಿ ಪ್ರತಿಮಾ, ಗ್ರಾ.ಪಂ ಅಧ್ಯಕ್ಷೆ ರತ್ನಾ ರಮೇಶ್, ಉಪಾಧ್ಯಕ್ಷೆ ಅಶ್ವಿನಿ, ಸದಸ್ಯರಾದ ಹರೀಶ್, ರಾಜಶೇಖರ್, ಹಳದಮ್ಮ, ಬಸವರಾಜಪ್ಪ, ಮಲ್ಲಪ್ಪ, ಮುಖಂಡರಾದ ಯೋಗೇಶಪ್ಪ, ಸಿಂಗಪ್ಪ, ಬೀರಪ್ಪ, ನಾಗರಾಜಪ್ಪ, ಸುರೇಶಪ್ಪ, ಸಿದ್ದೇಶಪ್ಪ, ಹುಚ್ಚರಾಯಪ್ಪ, ತಿಮ್ಮಪ್ಪ ಸೇರಿದಂತೆ ಮತ್ತಿತರರಿದ್ದರು.

# ನಿರುದ್ಯೋಗಿ ವಿದ್ಯಾರ್ಥಿಗಳಿಗೆ ತರಬೇತಿ

ದಾವಣಗೆರೆ,ಆ.8- ಜಿಲ್ಲಾ ಉದ್ಯಮ ಕೇಂದ್ರದ ವತಿಯಿಂದ ಗ್ರಾಮೀಣ ಪ್ರದೇಶದ ವಿದ್ಯಾವಂತ ನಿರುದ್ಯೋಗಿಗಳಿಗೆ ಮೊಬೈಲ್ ರಿಪೇರಿ, ಮೋಟಾರ್ ರೀವೈಂಡಿಂಗ್, ಗೃಹ ಎಲೆಕ್ಟ್ರಿಕಲ್ ವೈರಿಂಗ್, ತಾಂತ್ರಿಕ ವಿಷಯಗಳ ಕುರಿತು ತಾಲ್ಲೂಕಿನ ತೋಳಹುಣಸೆ ಕೆನರಾ ಬ್ಯಾಂಕ್‌ನ ಆರ್-ಸೆಟಿ ತರಬೇತಿ ಸಂಸ್ಥೆ ಮೂಲಕ ಸಂಪೂರ್ಣ ಉಚಿತ ಹಾಗೂ ವಸತಿಯುತ ತರಬೇತಿಯನ್ನು ನೀಡಲಾಗುವುದು ಹಾಗೂ ತರಬೇತಿಯ ನಂತರ ಪ್ರತಿ ಅಭ್ಯರ್ಥಿಗೆ ರೂ. 5,000 ಮೊತ್ತದ ಉಚಿತ ಉಪಕರಣಗಳಕಿಟ್ ನೀಡಲಾಗುವುದು,

ಈ ತರಬೇತಿಯು 30 ದಿನಗಳ ವಸತಿಯುತ ತರಬೇತಿಯಾಗಿದ್ದು, 18 ರಿಂದ 45 ವರ್ಷದ ಜಿಲ್ಲೆಯ ಗ್ರಾಮೀಣ ಅಭ್ಯರ್ಥಿಗಳಿಗೆ ಮಾತ್ರ ಅನ್ವಯವಾಗುತ್ತದೆ. ವಿವರಕ್ಕೆ ಸಂಪರ್ಕಿಸುವ ಮೊಬೈಲ್ : 9448929717, 9845691958, 7019980484, 9964111314.


# ಕುಂಬಳೂರು ಹನುಮಂತ ದೇವಸ್ಥಾನಕ್ಕೆ ಅನುದಾನ : ಮುಜರಾಯಿ ಸಚಿವರ ಭರವಸೆ



ಮಲೇಬೆನ್ನೂರು, ಆ.8- ಕುಂಬಳೂರು ಗ್ರಾಮದ ಆರಾಧ್ಯ ದೈವ ಶ್ರೀ ಹನುಮಂತ ದೇವರ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡುವ ಕಾಮಗಾರಿಗೆ ಅಗತ್ಯ ಅನುದಾನ ನೀಡುವುದಾಗಿ ಮುಜರಾಯಿ ಇಲಾಖೆ ಸಚಿವರಾದ ಶ್ರೀಮತಿ ಶಶಿಕಲಾ ಜೊಲ್ಲೆ ಭರವಸೆ ನೀಡಿದ್ದಾರೆ.

ಸೋಮವಾರ ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಅವರ ನೇತೃತ್ವದಲ್ಲಿ ಹರಪನಹಳ್ಳಿಯಲ್ಲಿ ಸಚಿವರನ್ನು ಗ್ರಾಮಸ್ಥರು ಭೇಟಿ ಮಾಡಿ, ದೇವಸ್ಥಾನದ ನೂತನ ಕಟ್ಟಡ ಕಾಮಗಾರಿ ಬಗ್ಗೆ ಪೂರ್ಣ ಮಾಹಿತಿ ನೀಡಿದರು.

ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿದ್ದು, ಈಗಾಗಲೇ ಸಂಸದ ಜಿ.ಎಂ.ಸಿದ್ದೇಶ್ವರ ಅವರು ನನಗೆ ಪತ್ರ ಬರೆದು 50 ಲಕ್ಷ ರೂ. ಅನುದಾನ ನೀಡುವಂತೆ ಮನವಿ ಮಾಡಿದ್ದಾರೆ. ಈ ಕುರಿತು ಶೀಘ್ರ ಕ್ರಮ ಕೈಗೊಳ್ಳುವುದಾಗಿ ಸಚಿವರು ತಿಳಿಸಿದ್ದಾರೆಂದು ಗ್ರಾಮದ ಎನ್.ಲೋಕೇಶ್ 'ಜನತಾವಾಣಿ'ಗೆ ಹೇಳಿದರು. ನಿಯೋಗದಲ್ಲಿ ಗ್ರಾಮದ ಗೌಡ್ರ ಪರಮೇಶ್ವರಪ್ಪ, ಆರ್.ಹೆಚ್.ಬಸವರಾಜಪ್ಪ, ಹುಲ್ಲುಮನಿ ನಿಂಗಪ್ಪ, ರಾಜೀವ್ ಸ್ವಾಮಿ, ಜಿ.ಎಂ.ಹರೀಶ್, ಕೆ.ತಿಮ್ಮಣ್ಣ ಮತ್ತಿತರರಿದ್ದರು.




## ವಿದ್ಯಾರ್ಥಿ ಚಿತ್ರಕಲೆಯಲ್ಲಿ ಶಕ್ತಿಯ ಮೂಲ

ಮಲೇಬೆನ್ನೂರು ಗ್ರಾಮದ ರಾಜ ರಾಜೇಶ್ವರಿ ವಿದ್ಯಾ ಸಂಸ್ಥೆಯ ಪ್ರೌಢಶಾಲಾ ವಿದ್ಯಾರ್ಥಿನಿ ವರ್ಷಾ ಸಿ. ಚಿತ್ರಕಲೆಯಲ್ಲಿ ಮೂಡಿ ಬಂದಿರುವ 'ಶಕ್ತಿಯ ಮೂಲ'.

# ಮಲೇಬೆನ್ನೂರಿನಲ್ಲಿ ವ್ಯಸನ ಮುಕ್ತ ಜಾಗೃತಿ ಜಾಥಾ



ಮಲೇಬೆನ್ನೂರು, ಆ.8- ಇಲ್ಲಿನ ಪುರಸಭೆ ಮತ್ತು ನಾಡಕಚೇರಿ ಹಾಗೂ ಸಮುದಾಯ ಆರೋಗ್ಯ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಸರ್ಕಾರದ ನಿರ್ದೇ ಶನದಂತೆ ಲಿಂ. ಡಾ. ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆ ಅಂಗವಾಗಿ 'ವ್ಯಸನ ಮುಕ್ತ' ದಿನಾಚರಣೆಯನ್ನು ಆಚರಿಸಲಾಯಿತು.

ಪುರಸಭೆ ಆವರಣದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ 'ವ್ಯಸನ ಮುಕ್ತ'ದ ಬಗ್ಗೆ ಪ್ರತಿಜ್ಞಾ ವಿಧಿಯನ್ನು ಉಪ ತಹಶೀಲ್ದಾರ್ ಆರ್.ರವಿ ಬೋಧಿಸಿದರು.

ಆಯುರ್ವೇದ ವೈದ್ಯ ಡಾ. ರಮೇಶ್ ಮಾತನಾಡಿ, ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಸಂಕಲ್ಪ ಮಾಡಿದಾಗ ಆರೋಗ್ಯ ವಂತ ಸಮಾಜ ನಿರ್ಮಾಣ ಸಾಧ್ಯ ಎಂದರು.

ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್ ಮಾತನಾಡಿ, ಧರ್ಮಗುರುಗಳು ಸಮಾಜಕ್ಕಾಗಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಅಂತಹ ಡಾ. ಮಹಾಂತ ಶಿವಯೋಗಿಗಳ ಜನ್ಮದಿನವನ್ನು ವ್ಯಸನ ಮುಕ್ತ ದಿನವನ್ನಾಗಿ ಆಚರಿಸುತ್ತಿರುವುದು ಸಂತೋಷದ ವಿಷಯ ಎಂದರು.

ಪುರಸಭೆ ಸದಸ್ಯ ಸಾಬೀರ್ ಅಲಿ ಮಾತನಾಡಿದರು. ಪುರಸಭೆ ಸದಸ್ಯರಾದ ಮಾಜೀದ್, ನಯಾಜ್, ಬೆಣ್ಣೆಹಳ್ಳಿ ಸಿದ್ದೇಶ್, ಟಿ.ಹನುಮಂತಪ್ಪ, ಎ.ಕೆ.ಲೋಕೇಶ್, ಮಾಜಿ ಸದಸ್ಯ ಯುಸೂಫ್, ಚಮನ್, ವೈದ್ಯಾಧಿಕಾರಿ ಡಾ.ನಿಸಾರ್, ಪುರಸಭೆ ಅಧಿಕಾರಿಗಳಾದ ದಿನಕರ್, ಉಮೇಶ್, ನವೀನ್, ಆರೋಗ್ಯ ಕೇಂದ್ರದ ಕಿರಣ್, ಕಾಜಲ್ ಕಿರಣ್, ಯಾಸ್ಮೀನ್, ಶಿಕ್ಷಕ ಹಾಲೇಶಪ್ಪ ಸೇರಿದಂತೆ ಆಶಾ ಕಾರ್ಯಕರ್ತೆಯರು, ಪುರಸಭೆ ಪೌರ ಕಾರ್ಮಿಕರು ಭಾಗವಹಿಸಿದ್ದರು.

# ಕೊಕ್ಕನೂರು : ಅಮೃತ ಮಹೋತ್ಸವಕ್ಕೆ ತಯಾರಿ



ಮಲೇಬೆನ್ನೂರು, ಆ. 8 - 75ನೇ ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವದ ಅಂಗವಾಗಿ ಕೊಕ್ಕನೂರು ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಆವರಣದಲ್ಲಿ ಮಕ್ಕಳಲ್ಲಿ ದೇಶಪ್ರೇಮ ಮೂಡಿಸುವ ಸಲುವಾಗಿ ಸಮಾಜ ವಿಜ್ಞಾನ ಶಿಕ್ಷಕಿ ಶ್ವೇತಾ ಅವರ ಮಾರ್ಗದರ್ಶನದಲ್ಲಿ ರಂಗೋಲಿ ಸ್ಪರ್ಧೆಯನ್ನು ಏರ್ಪಡಿ ಸಲಾಗಿತ್ತು. ಭಾರತ ಮಾತೆ, ಭಾರತ ಧ್ವಜ ಹಾಗೂ ದೇಶ ಭಕ್ತಿ ಪೂರಕ ಚಿತ್ರಗಳನ್ನು ವಿದ್ಯಾರ್ಥಿಗಳು ರಂಗೋಲಿ ಮೂಲಕ ಬಿಡಿಸಿ ಅಮೃತ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯ ಮಂಜಪ್ಪ, ಶಿಕ್ಷಕರಾದ ಬಿ. ಆರ್. ಕುಮಾರಚಾರಿ, ರವಿ ಕುಮಾರ್ ನಾಯ್ಕ, ಸರೋಜಿನಿ, ಯಶೋಧ, ಛಾಯಾ, ಸಂತೋಷ್ ಮತ್ತು ಇತರರು ಉಪಸ್ಥಿತರಿದ್ದರು.

# ಹರಪನಹಳ್ಳಿ : ಪುರಸಭೆಯ ಸಿಸಿ ರಸ್ತೆ ಕಾಮಗಾರಿ ಅವೈಜ್ಞಾನಿಕ



ಹರಪನಹಳ್ಳಿ, ಆ. 8- ಪಟ್ಟಣದ 4ನೇ ವಾರ್ಡಿನ ಹೆಂಚಿನ ಓಣಿಯಲ್ಲಿ ಪುರಸಭೆ ಹಮ್ಮಿಕೊಂಡಿರುವ ಸಿಸಿ ರಸ್ತೆ ಅವೈಜ್ಞಾನಿಕ ಕಾಮಗಾರಿಯಿಂದ ಸ್ವಚ್ಛ ಭಾರತ ಯೋಜನೆಗೆ ಅವಹೇಳನ ಮಾಡಿದಂತಾಗಿದೆ ಎಂದು ಎಪಿಎಂಸಿ ಮಾಜಿ ಅಧ್ಯಕ್ಷ ಕೆ. ಎಂ. ಬಸವರಾಜಯ್ಯ ದೂರಿದ್ದಾರೆ.

ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆಯು ಜಾರಿಯಲ್ಲಿದ್ದು, ಈಗ ಪ್ರಾರಂಭಿಸಿರುವ ಸಿಸಿ ರಸ್ತೆ ಮೇಲ್ಭಾಗದ ಮಧ್ಯದಲ್ಲಿ ಚರಂಡಿ ಮಾಡುತ್ತಿದ್ದಾರೆ. ಈ ರೀತಿ ಸಿಸಿ ರಸ್ತೆ ನಿರ್ಮಾಣ ಮಾಡಿದರೆ ಚರಂಡಿ ನೀರು ಮತ್ತೆ ರಸ್ತೆ ಮೇಲೆ ಹರಿಯುತ್ತದೆ. ವಾರ್ಡ್ ಸದಸ್ಯ ಕಿರಣ ಶ್ಯಾನಭೋಗ ಅವರೊಂದಿಗೆ ಚರ್ಚಿಸಿದಾಗ ಅವರು ಹಾರಿಕೆ ಉತ್ತರ ನೀಡಿ ಒಳಚರಂಡಿ ಯೋಜನೆ ವಿಫಲವಾಗಿದೆ. ಈಗ ನಡೆಯುತ್ತಿರುವ ಕಾಮಗಾರಿ ಸರಿಯಿದೆ ಎಂದು ನುಣುಚಿಕೊಳ್ಳುತ್ತಾರೆ. ಬಿಜೆಪಿ ಸರ್ಕಾರದ ಆಡಳಿತದ ಅವಧಿಯಲ್ಲಿ ಕೈಗೊಂಡಿರುವ ಒಳಚರಂಡಿ ಕಾಮಗಾರಿ ವಿಫಲ ಎಂದು ಅದೇ ಪಕ್ಷದ ಪುರಸಭೆ ಸದಸ್ಯ ಹೇಳುತ್ತಿರುವುದು ಹಾಸ್ಯಾಸ್ಪದವಾಗಿದೆ. ಸಾರ್ವಜನಿಕರ ತೆರಿಗೆ ಹಣದಲ್ಲಿ ಕಾಮಗಾರಿ ಮಾಡುತ್ತಿರುವರೋ ಅಥವಾ ಸದಸ್ಯರು ಅವರ ಮನೆಯಲ್ಲಿ ಕಾಮಗಾರಿ ಮಾಡಿಸುತ್ತಿದ್ದಾರೋ ತಿಳಿಯುತ್ತಿಲ್ಲ.


ಕೇವಲ ಮತ ಹಾಕಿರುವ ಇಲ್ಲಿಯ ನಿವಾಸಿಗಳನ್ನು ಸಂತೈಸಲು ಸಿಸಿ ರಸ್ತೆ ಮಾಡಲಾಗುತ್ತಿದೆ. ಸಾರ್ವಜನಿಕರು ಇಂತಹ ಜನ ವಿರೋಧಿ ಕೆಲಸಗಳನ್ನು ಕಠಿಣವಾಗಿ ವಿರೋಧಿಸುವ ಮೊದಲೇ ಸ್ವಚ್ಛ ಭಾರತ್ ಯೋಜನೆಯನ್ನು ಅವಹೇಳನ ಮಾಡುವ ಅವರು ಎಚ್ಚೆತ್ತುಕೊಳ್ಳುವುದು ಸೂಕ್ತ ಎಂದು ಪತ್ರಿಕಾ ಹೇಳಿಕೆ ನೀಡಿದ್ದಾರೆ.

# ಗಣೇಶೋತ್ಸವಕ್ಕೆ ಹಸಿರು ನಿಶಾನೆ

**(1ನೇ ಪುಟದಿಂದ)** ಮುಖ್ಯಮಂತ್ರಿಯವರನ್ನು ಇಂದು ದೂರವಾಣಿ ಮೂಲಕ ಸಂಪರ್ಕಿಸಿ, ಗಣೇಶೋತ್ಸವ ಆಚರಣೆಗೆ ಸಂಬಂಧಿಸಿದಂತೆ ಚರ್ಚೆ, ಸಮಾಲೋಚನೆ ನಡೆಸಿದ ಸಂದರ್ಭದಲ್ಲಿ ಎಲ್ಲ ನಿರ್ಬಂಧಗಳನ್ನು ರದ್ದುಗೊಳಿಸುವಂತೆ ಆದೇಶಿಸಿದ್ದಾರೆ ಎಂದು ಸ್ಪಷ್ಟಪಡಿಸಿದರು.


ಸ್ಥಳೀಯ ಸಂಸ್ಥೆಗಳು ಇದುವರೆಗೂ ಯಾವುದೇ ತೀರ್ಮಾನ ಕೈಗೊಂಡಿದ್ದರೂ, ಸರ್ಕಾರದ ತೀರ್ಮಾನದ ನಂತರ ಗಲ್ಲಿ ಗಲ್ಲಿಗಳಲ್ಲಿ ಗಣೇಶೋತ್ಸವ ಆಚರಿಸಲು ಅನುಮತಿ ನೀಡಬಹುದಾಗಿದೆ ಎಂದರು.


## ಜಾಲಿಮರದ ಗಂಗಾಧರಪ್ಪ ನಿಧನ



ದಾವಣಗೆರೆ ಹಾಸಬಾವಿ ಸರ್ಕಲ್ ನರಸರಾಜ ಪೇಟೆ 1ನೇ ಕ್ರಾಸ್ ವಾಸಿ
**ಜಾಲಿಮರದ ಗಂಗಾಧರಪ್ಪ**
ಇವರು ದಿನಾಂಕ 8.8.2022ರ ಸೋಮವಾರ ರಾತ್ರಿ 10.15ಕ್ಕೆ ನಿಧನರಾದರು. ಮೃತರಿಗೆ 63 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಸೊಸೆ, ಹಾಗೂ ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 9.8.2022ರ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
**ದುಃಖತಪ್ತ ಕುಟುಂಬ ವರ್ಗ**
**78922 68381, 80736 45687**

## ಆರಾಧ್ಯ ಎಂ.ಬಿ. ನಿಧನ



ದಾವಣಗೆರೆ ಚಿಕ್ಕಮ್ಮಣಿ ದೇವರಾಜ್ ಅರಸು ಬಡಾವಣೆ ವಾಸಿಯಾದ
**ದಿ॥ ಹೆಚ್. ವೀರಯ್ಯ**
(ಕಗತ್ತೂರು ಹಿರೇಮಠ) ಇವರ ಪುತ್ರ
**ಆರಾಧ್ಯ ಎಂ.ಬಿ.**
(49) ಇವರು ದಿನಾಂಕ : 08.08.2022ರ ಬೆಳಿಗ್ಗೆ 10.00 ಗಂಟೆಗೆ ನಿಧನರಾಗಿರುತ್ತಾರೆ.
ಇಬ್ಬರು ಗಂಡು ಮಕ್ಕಳು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ : 09.08.2022ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ವೀರಶೈವ ರುದ್ರಭೂಮಿಯ ಬೂದಾಳ್ ರಸ್ತೆ, ಗಾಂಧಿನಗರ, ದಾವಣಗೆರೆಯಲ್ಲಿ ನೆರವೇರಿಸಲಾಗುವುದು.
**ಇಂತಿ ದುಃಖ ತಪ್ತ ಕುಟುಂಬ ವರ್ಗ :**
**ಫೋನ್ : 90363 33863, 97394 24825**
ಸೂಚನೆ : ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ : 16.08.2022ರ ಮಂಗಳವಾರ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು.


# ನಗರಕ್ಕೆ ಇಂದು ಉಸ್ತುವಾರಿ ಸಚಿವರು

ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ ಬಸವರಾಜ್ (ಭೈರತಿ) ಅವರು ಇಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ಹಾಗೂ ಸಾರ್ವಜನಿಕರನ್ನು ಭೇಟಿ ಮಾಡುವರು. ನಂತರ ಮಧ್ಯಾಹ್ನ 1 ಗಂಟೆಗೆ ಕಂದಾಯ ಸಚಿವರೊಂದಿಗೆ ಹೊನ್ನಾಳಿ ತಾಲ್ಲೂಕಿನ ಮಳೆಹಾನಿ ಪ್ರದೇಶಗಳಿಗೆ ಭೇಟಿ ಮತ್ತು ಪರಿಶೀಲನೆ ನಡೆಸುವರು. ಮಧ್ಯಾಹ್ನ 3.30ಕ್ಕೆ ಹೊನ್ನಾಳಿಯಿಂದ ಬೆಂಗಳೂರಿಗೆ ತೆರಳುವರು.


॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ



ದಾವಣಗೆರೆ ಸಿಟಿ ಬಾಳೆಹೊಲದ ಸಿದ್ದಲಿಂಗಪ್ಪ ರಸ್ತೆ ವಾಸಿ
**ಕರೇಶಿವಪ್ಪರ ಭರಮಣ್ಣ ಮತ್ತು ಬಸವರಾಜಪ್ಪ ಹಾಗೂ ಮಕ್ಕಳು**
ಇವರುಗಳು ಮಾಡುವ ವಿಜ್ಞಾಪನೆಗಳು.
ದಿನಾಂಕ 2.8.2022ನೇ ಮಂಗಳವಾರ ರಾತ್ರಿ 9 ಗಂಟೆಗೆ ನಮ್ಮ ಪೂಜ್ಯ ಅಣ್ಣನವರಾದ
**ಶ್ರೀ ಕರೇಶಿವಪ್ಪರ ರೇವಣಸಿದ್ದಪ್ಪ** ಇವರು
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
**ದಿನಾಂಕ 10.8.2022ನೇ ಬುಧವಾರ ಬೆಳಿಗ್ಗೆ 11 ಗಂಟೆಗೆ ಶ್ರೀ ಕಿರುವಾಡಿ ವೀರಬಸಪ್ಪ ಕಲ್ಯಾಣ ಮಂಟಪ, ಶ್ರೀ ಲಿಂಗೇಶ್ವರ ದೇವಸ್ಥಾನ ಆವರಣ, ಗೀತಾಂಜಲಿ ಟಾಕೀಸ್ ಪಕ್ಕ, ದಾವಣಗೆರೆಯಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ, ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : **ಕರೇಶಿವಪ್ಪರ ಕೆ.ಆರ್. ಸಿದ್ದೇಶ್ವರಪ್ಪ ಮತ್ತು ಸಹೋದರರು, ಸಹೋದರಿಯರು, ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು, ಕರೇಶಿವಪ್ಪರ ವಂಶಸ್ಥರು, ಬಾಳೆಹೊಲದ ವಂಶಸ್ಥರು, ತೆಲಗಿ ವಂಶಸ್ಥರು ಹಾಗೂ ಬಂಧು-ಮಿತ್ರರು.**


# ರಾಜಸ್ಥಾನ ಶ್ಯಾಮ್ ಜಿ ದೇವಾಲಯದಲ್ಲಿ ನೂಕು ನುಗ್ಗಲು : ಮೂರು ಸಾವು

ಸಿಕರ್ (ರಾಜಸ್ಥಾನ), ಆ. 8 – ರಾಜಸ್ಥಾನದ ಪ್ರಸಿದ್ಧ ಖಾಟು ಶ್ಯಾಮ್ ಜಿ ದೇವಾಲಯದ ಎದುರು ಉಂಟಾದ ನೂಕನುಗ್ಗಲಿನಲ್ಲಿ ಮೂವರು ಮಹಿಳೆಯರು ಸಾವನ್ನಪ್ಪಿದ್ದಾರೆ. ಸೋಮವಾರ ಬೆಳಗಿನ ಜಾವ ದರ್ಶನಕ್ಕಾಗಿ ಬಾಗಿಲುಗಳನ್ನು ತೆರೆದಾಗ ಈ ಘಟನೆ ನಡೆದಿದೆ. ರಾಜಸ್ಥಾನ ಹಾಗೂ ನೆರೆ ರಾಜ್ಯಗಳಿಂದ ಬಂದಿದ್ದ ಭಕ್ತರು ದರ್ಶನಕ್ಕಾಗಿ ಕಾಯುತ್ತಿದ್ದರು. ಬೆಳಿಗ್ಗೆ 4.30ರ ಸಮಯದಲ್ಲಿ ಬಾಗಿಲು ತೆರೆದಾಗ ನೂಕು ನುಗ್ಗಲು ಉಂಟಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. 63 ವರ್ಷದ ಮಹಿಳೆ ನೂಕು ನುಗ್ಗಲಿಗೆ ಸಿಲುಕಿ ಸಾವನ್ನಪ್ಪಿದ್ದಾರೆ. ಅವರ ಹಿಂದಿದ್ದ ಇಬ್ಬರು ಮಹಿಳೆಯರು ಕಾಲ್ತುಳಿತಕ್ಕೆ ಸಿಲುಕಿ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

# ಸಂಕ್ಲೀಪುರ : ವಿದ್ಯುತ್ ತಂತಿ ತಗುಲಿ ಯುವಕ ಸಾವು

ಮಲೇಬೆನ್ನೂರು, ಆ.8- ಸಂಕ್ಲೀಪುರ ಗ್ರಾಮದಲ್ಲಿ ಹೊಸಮನೆಗೆ ಪೇಂಟ್ ಮಾಡುತ್ತಿರುವಾಗ ವಿದ್ಯುತ್ ತಂತಿಯ ಸ್ಪರ್ಶವಾಗಿ ಯುವಕನೊಬ್ಬ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ಭಾನುವಾರ ನಡೆದಿದೆ.

ಪೇಂಟ್ ಕೆಲಸ ಮಾಡುತ್ತಿದ್ದ ತ್ಯಾವಣಿಗಿ ಗ್ರಾಮದ ಸಾಗರ್ (18) ತಂದೆ ಅಣ್ಣಪ್ಪ ಎಂಬಾತನೇ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟ ಯುವಕನಾಗಿದ್ದು, ಘಟನೆಯಲ್ಲಿ ಮನೆ ಮಾಲೀಕ ರಮೇಶ್ ಎಂಬಾತನೂ ವಿದ್ಯುತ್ ಸ್ಪರ್ಶದಿಂದ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸ್ಥಳಕ್ಕೆ ಮಲೇಬೆನ್ನೂರು ಪಿಎಸ್ಐ ರವಿಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

ಜಿ.ಪಂ ಮಾಜಿ ಸದಸ್ಯ ಎಂ.ನಾಗೇಂದ್ರಪ್ಪ ಅವರೂ ಗ್ರಾಮಕ್ಕೆ ಭೇಟಿ ನೀಡಿ, ಮೃತ ಸಾಗರ್ ಕುಟುಂಬದವರಿಗೆ ಸಾಂತ್ವನ ಹೇಳಿ, ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ. ಬೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯವೂ ಈ ಘಟನೆಗೆ ಕಾರಣ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

# ವಯೋಮಾನಕ್ಕೆ ತಕ್ಕಂತೆ ಕಲಿಯಲು ಅರ್ಧಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿಫಲ

ನವದೆಹಲಿ, ಅ. 8 – ಕೊರೊನಾ ನಂತರ ಶೇ.50ಕ್ಕೂ ಹೆಚ್ಚು ವಿದ್ಯಾರ್ಥಿಗಳು ತಮ್ಮ ವಯೋಮಾನಕ್ಕೆ ತಕ್ಕ ರೀತಿಯಲ್ಲಿ ಕಲಿಯುವಿಕೆಯ ಹಂತಕ್ಕೆ ಬರಲು ವಿಫಲರಾಗಿದ್ದಾರೆ ಎಂದು ಇತ್ತೀಚೆಗೆ ನಡೆಸಲಾದ ಸಮೀಕ್ಷೆಯೊಂದು ತಿಳಿಸಿದೆ. ಸ್ಮೈಲ್ ಇಂಡಿಯಾ ಸಂಸ್ಥೆ ದೇಶದ 48 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸಮೀಕ್ಷೆಗೆ ಒಳಪಡಿಸಿತ್ತು. ಈ ವರದಿಯ ಪ್ರಕಾರ ಶೇ.50ರಷ್ಟು ಕಡಿಮೆ ವಿದ್ಯಾರ್ಥಿಗಳು ಮಾತ್ರ ಕಳೆದ ಎರಡು ವರ್ಷಗಳಲ್ಲಿ ಆಗಿರುವ ಕಲಿಕಾ ನಷ್ಟವನ್ನು ಸರಿದೂಗಿಸಲು ಸಾಧ್ಯವಾಗಿದೆ. ವಿದ್ಯಾರ್ಥಿಗಳು ಸಾಮಾಜಿಕ ಕೌಶಲ್ಯಗಳಲ್ಲಿ ಹಿಂದೆ ಬಿದ್ದಿದ್ದಾರೆ. ಕಲಿಕೆಯ ಬಗ್ಗೆ ಗಮನ ಕೇಂದ್ರೀಕರಿಸಲು ಸಾಧ್ಯವಾಗುತ್ತಿಲ್ಲ. ಗಮನ ಕೇಂದ್ರೀಕರಿಸುವ ಸಾಮರ್ಥ್ಯ ಕುಸಿದಿದೆ ಎಂದು ಶೇ.48ರಷ್ಟು ಶಿಕ್ಷಕರು ಹೇಳಿದ್ದಾರೆ.

# ಮಕ್ಕಳ ಅಸ್ಥಿ ಮಜ್ಜೆ ಕಸಿ ರೋಗಿಗಳಿಗೆ ಭರವಸೆಯ ಆಶಾಕಿರಣ

ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮಣಿಪಾಲದ ಸಮಗ್ರ ಕ್ಯಾನ್ಸರ್ ಆರೈಕೆ ಕೇಂದ್ರದ ಭಾಗವಾಗಿರುವ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೋಲಜಿ ವಿಭಾಗವು ಯಶಸ್ವಿಯಾಗಿ ಮಕ್ಕಳಿಗೆ ಅಸ್ಥಿ ಮಜ್ಜೆ ಚಿಕಿತ್ಸೆಯನ್ನು ನೀಡುತ್ತಿದೆ. ಅಲ್ಲದೇ ಇದರ ಮೂಲಕ ಹಲವಾರು ಮಕ್ಕಳಿಗೆ ಹೊಸ ಬದುಕನ್ನು ನೀಡಿದೆ.

'ಅಸ್ಥಿಮಜ್ಜೆ ಕಸಿ ವಿವಿಧ ಬಗೆಯ ಕ್ಯಾನ್ಸರ್ ಮತ್ತು ರಕ್ತ ಸಂಬಂಧಿ ಅಸ್ವಸ್ಥತೆಗಳಿಗೆ ಜೀವರಕ್ಷಕ ವಿಧಾನವಾಗಿದೆ. ಮಕ್ಕಳಿಗಾಗಿ ಈ ಸುಸಜ್ಜಿತ ಸೇವೆಗಳನ್ನು ಪ್ರಾರಂಭಿಸಿರುವುದರಿಂದ ಕಡಿಮೆ ವೆಚ್ಚದಲ್ಲಿ ಈ ಚಿಕಿತ್ಸೆ ಪಡೆಯಲು ಸಾಧ್ಯವಾಗುತ್ತಿದೆ' ಎಂದು ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ॥ ಶರತ್ ಕುಮಾರ್ ರಾವ್ ಅವರು ತಿಳಿಸಿದ್ದಾರೆ.

ವೈದ್ಯಕೀಯ ಅಧೀಕ್ಷಕರಾದ ಡಾ॥ ಅವಿನಾಶ್ ಶೆಟ್ಟಿ ಅವರ ಅಭಿಪ್ರಾಯದಂತೆ 'ಅಸ್ಥಿಮಜ್ಜೆಯಂತಹ ಸಂಕೀರ್ಣ ಚಿಕಿತ್ಸೆಯನ್ನು ಒಬ್ಬರಿಂದ ನಿರ್ವಹಿಸಲು ಸಾಧ್ಯವಿಲ್ಲ. ಇದಕ್ಕೆ ತರಬೇತಿ ಪಡೆದ ತಜ್ಞ ವೈದ್ಯರ ತಂಡ ಬೇಕಾಗುತ್ತದೆ. ಈಗ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಅಸ್ಥಿಮಜ್ಜೆ ಕಸಿ ಯಶಸ್ವಿಯಾಗಿ ನಡೆಸಲು ಅಗತ್ಯವಿರುವ ಎಲ್ಲಾ ಸೌಲಭ್ಯಗಳು ಲಭ್ಯವಿರುವುದರಿಂದ, ಬಹಳಷ್ಟು ರೋಗಿಗಳಿಗೆ ಸಹಾಯವಾಗಲಿದೆ ಎಂದರು.

ದೇಶದಲ್ಲಿ ಬಹಳಷ್ಟು ರೋಗಿಗಳಿಗೆ ಅಸ್ಥಿ ಮಜ್ಜೆ ಕಸಿ ಅವಶ್ಯಕತೆ ಇದೆ. ಪ್ರಸ್ತುತ ದೇಶದಲ್ಲಿ ಸುಮಾರು 2500 ಕಸಿಗಳನ್ನು ಮಾತ್ರ ಮಾಡಲಾಗುತ್ತಿದೆ. ಇದಕ್ಕೆ ಮಾಹಿತಿ ಕೊರತೆ, ಹಣಕಾಸಿನ ತೊಂದರೆಯೂ ಕಾರಣವಾಗಿದೆ ಎಂದು ಡಾ॥ ವಿನಯ್ ಎಂ.ವಿ ಅವರು ತಿಳಿಸಿದ್ದಾರೆ. 'ಅಸ್ಥಿಮಜ್ಜೆ ಕಸಿ ಮಾಡುವಿಕೆಯು ಗುಣಪಡಿಸಲಾಗದ ಕಾಯಿಲೆಗಳಿಂದ ಬಳಲುತ್ತಿರುವ ಅನೇಕ ರೋಗಿಗಳ ಜೀವನವನ್ನು ಬದಲಾಯಿಸಿದೆ ಎಂದು ವಿಭಾಗದ ಮುಖ್ಯಸ್ಥರಾದ ಡಾ॥ ವಾಸುದೇವ ಭಟ್ ತಿಳಿಸಿದ್ದಾರೆ.

ವಿಭಾಗವು ಸಾಧ್ಯವಾದಾಗಲೆಲ್ಲಾ ಆರ್ಥಿಕ ನೆರವು, ಪೂರಕ ಪೌಷ್ಟಿಕಾಂಶ ಮತ್ತು ವಸತಿ ಸೌಲಭ್ಯ ಒದಗಿಸುವ ಮೂಲಕ ಈ ರೋಗಿಗಳಿಗೆ ಸಮಗ್ರ ಚಿಕಿತ್ಸೆ ನೀಡುತ್ತಿದೆ ಎಂದು ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ॥ ಎಂ.ವಿ. ಅರ್ಚನಾ ಅವರು ತಿಳಿಸಿದ್ದಾರೆ.

# ಮೌಢ್ಯಾಚರಣೆಗಳನ್ನು ಕೈಬಿಟ್ಟರೆ ಜಗತ್ತು ಸ್ವರ್ಗ

## ಬಸವ ಪಂಚಮಿ ಕಾರ್ಯಕ್ರಮದಲ್ಲಿ ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ಅಭಿಮತ



ದಾವಣಗೆರೆ, ಜು. 8- ವಿಶ್ವದ ಮೂಢನಂಬಿಕೆಗಳ ರಾಜಧಾನಿ ಭಾರತ. ಇಲ್ಲಿ ಮೂಢಾಚರಣೆಗಳು ಹೆಚ್ಚುತ್ತಲೇ ಇದ್ದು, ಇಂತಹ ಮೂಢನಂಬಿಕೆಗಳ ಆಚರಣೆಯಿಂದಾಗಿ ದೇಶದ ಉದ್ಧಾರ ಅಸಾಧ್ಯ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು. ನಗರದ ವಿರಕ್ತಮಠದಲ್ಲಿ ಹಮ್ಮಿಕೊಂಡಿದ್ದ ಬಸವ ಪಂಚಮಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಕ್ಕಳಿಗೆ ಹಾಲು ವಿತರಣೆ ಮಾಡಿ ಶ್ರೀಗಳು ಮಾತನಾಡಿದರು.

ಮೌಢ್ಯಾಚರಣೆಗಳನ್ನು ಬಿಟ್ಟರೆ ಜಗತ್ತು ಸ್ವರ್ಗವಾಗುತ್ತದೆ. ಬೆಳಿಗ್ಗೆ ಎಡಗಡೆ ಮಗ್ಗುಲಿನಿಂದ ಎದ್ದರೆ ಅಪಶಕುನ, ಬಲಗಡೆಯಿಂದ ಎದ್ದರೆ ಶುಭ ಶಕುನ ಎನ್ನುತ್ತಾರೆ. ಯಾವ ಕಡೆ ಎದ್ದರೇನು ಜೀವಂತವಾಗಿ ಇದೀವಿ ಎಂಬುದೇ ಸಂತೋಷದ ವಿಚಾರ. ಇಲ್ಲಿ ಮೂಢನಂಬಿಕೆ ಬಿಡಬೇಕು ಎಂದರು.

ತಿಥಿ, ನಕ್ಷತ್ರ, ಅಮಾವಾಸೆ, ಹುಣ್ಣಿಮೆ, ರಾಹುಕಾಲ, ಗುಳಿಕಕಾಲ ಎಂದು ನಂಬಿ ಕುಳಿತುಕೊಳ್ಳುವುದು. ಮಂಗಳವಾರ, ಶುಕ್ರವಾರ ಹಣ ಕೊಡುವುದಿಲ್ಲ ಎಂದು ಹೇಳುವುದು ಮೂಢನಂಬಿಕೆ. ಇಂತಹ ಅಜ್ಞಾನ, ಮೂಢನಂಬಿಕೆಯಿಂದ ದೇಶದ ಅಭಿವೃದ್ಧಿ ಅಸಾಧ್ಯವಾಗಿದೆ. ಮೂಢನಂಬಿಕೆಯಿಂದ ಹೊರಬರಬೇಕು ಎಂದು ಕರೆ ನೀಡಿದರು.

12ನೇ ಶತಮಾನದಲ್ಲಿಯೇ ಬಸವಣ್ಣನವರು ಮೌಢ್ಯತೆ ವಿರುದ್ಧ ಬಹು ದೊಡ್ಡ ಕ್ರಾಂತಿಯನ್ನೇ ಮಾಡಿದ್ದರು. ಮೂಢನಂಬಿಕೆಗಳನ್ನು ಆಚರಣೆ ಮಾಡುವುದರಿಂದ ಮಾನವರು ಮಾನಸಿಕ ಬಂಧನಕ್ಕೆ ಒಳಗಾಗುತ್ತಾರೆ. ದೇಶದಲ್ಲಿ ಆಲ್ಕೋಹಾಲ್ ಸಿಕ್ಕಷ್ಟು ಸುಲಭವಾಗಿ ಹಾಲು ಸಿಗುವುದಿಲ್ಲ. ಹಾಲನ್ನು ನಿತ್ಯ ಬಳಕೆ ಮಾಡುವುದರಿಂದ ಅನೇಕ ರೋಗಗಳನ್ನು ವಾಸಿ ಮಾಡಿಕೊಳ್ಳಲು ಸಾಧ್ಯವಿದೆ ಎಂದರು.

ಕಲ್ಲು ನಾಗರ, ಹುತ್ತಕ್ಕೆ ಹಾಲು ಹಾಕುವ ಬದಲು ಮಕ್ಕಳಿಗೆ, ರೋಗಿಗಳಿಗೆ, ವಯೋವೃದ್ಧರಿಗೆ ಕೊಡುವ ಮೂಲಕ ಆರೋಗ್ಯವಂತರನ್ನಾಗಿ ಮಾಡುವ ಮೂಲಕ ವೈಚಾರಿಕತೆಯ ಹಿನ್ನೆಲೆಯಲ್ಲಿ ಹಬ್ಬಗಳನ್ನು ಆಚರಿಸೋಣ ಎಂದು ಹಿತ ನುಡಿದರು.

ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಮಾತನಾಡಿ, ಬಸವ ತತ್ವವನ್ನು ಚಾಚೂ ತಪ್ಪದೇ ಪಾಲಿಸುವ ಮಠ ಚಿತ್ರದುರ್ಗ ಮುರುಘಾ ಮಠವಾಗಿದೆ. ಶಿವಮೂರ್ತಿ ಮುರುಘಾ ಶರಣರ ಹಾದಿಯಲ್ಲಿಯೇ ಶ್ರೀ ಬಸವ ಪ್ರಭು ಸ್ವಾಮೀಜಿ ಬಸವ ತತ್ವ ಬಿತ್ತುವ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದಾರೆ ಎಂದು ಶ್ಲಾಘಿಸಿದರು.

ಬಸವ ಕೇಂದ್ರದ ಪದಾಧಿಕಾರಿಗಳಾದ ನಾಸೀರ್ ಅಹಮದ್, ಎಸ್. ಓಂಕಾರಪ್ಪ, ಹಾಸಬಾವಿ ಕರಿಬಸಪ್ಪ, ಲಂಬಿ ಮುರುಗೇಶಪ್ಪ, ಕಣಕುಪ್ಪಿ ಮುರುಗೇಶಪ್ಪ, ಮಹದೇವಮ್ಮ, ಕಂಚಿಕೆರೆ ಮಹೇಶ್, ಪ್ರಾಚಾರ್ಯ ರೋಷನ್ ಮತ್ತಿತರರಿದ್ದರು.

# ಕಲ್ಲು ನಾಗರದ ಹೆಸರಿನ ಹಾಲು ಮಕ್ಕಳಿಗೆ ನೀಡಿ

## ಕಲ್ಲು ನಾಗರಕ್ಕೆ ಹಾಕುವ ಹಾಲು ಮಕ್ಕಳ ಪಾಲು ಸಪ್ತಾಹದಲ್ಲಿ ಜಯ ಮೃತ್ಯುಂಜಯ ಶ್ರೀಗಳು



ದಾವಣಗೆರೆ, ಆ. 8- ಕಣ್ಣಿಗೆ ಕಾಣುವ ನಿಜವಾದ ದೇವರು ಎಂದರೆ ಮಕ್ಕಳು, ಅಂತಹ ಮಕ್ಕಳಿಗೆ ಹಾಲು ನೀಡಬೇಕು ಎಂದು ಕೂಡಲ ಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ನಗರದ ಪಿಎಲ್‌ಇ ಟ್ರಸ್ಟ್‌ನ ಬಿಜೆಎಂ ಸ್ಕೂಲ್, ಜಿಎನ್‌ಬಿ ಸ್ಕೂಲ್ ಸಹಯೋಗದಲ್ಲಿ ನಾಗರ ಪಂಚಮಿ ಹಬ್ಬದ ಅಂಗವಾಗಿ ಆಯೋಜಿಸಿದ್ದ 24ನೇ ವರ್ಷದ 'ಕಲ್ಲ ನಾಗರಕ್ಕೆ ಹಾಕುವ ಹಾಲು ಮಕ್ಕಳ ಪಾಲು' ಸಪ್ತಾಹವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಾಲು ಪವಿತ್ರವಾದದ್ದು. ಅದು ಅಮೃತಕ್ಕೆ ಸಮ ಎಂದರು.

ಹಬ್ಬದ ಹೆಸರಿನಲ್ಲಿ ಅಮೃತಕ್ಕೆ ಸಮನಾದ ಹಾಲನ್ನು ಕಲ್ಲ ನಾಗರಕ್ಕೆ, ಹುತ್ತಕ್ಕೆ, ಬೆಳ್ಳಿ ನಾಗರಕ್ಕೆ ಹಾಕದೇ ಅದೇ ಹಾಲನ್ನು ಬಡವರಿಗೆ, ನಿರ್ಗತಿಕರಿಗೆ, ರೋಗಿಗಳಿಗೆ, ಮಕ್ಕಳಿಗೆ ನೀಡುವುದರಿಂದ ಪುಣ್ಯ ಬರುತ್ತದೆ. ಅದನ್ನು ಬಿಟ್ಟು ಅದೇ ಪೌಷ್ಠಿಕಾಂಶಯುಕ್ತ ಹಾಲನ್ನು ಅಪವ್ಯಯ ಮಾಡಬಾರದು. ನಾವು ಕಳೆದ 24 ವರ್ಷಗಳಿಂದ ಅಂಗವಿಕಲ ಮಕ್ಕಳು, ಬುದ್ದಿಮಾಂದ್ಯ ಮಕ್ಕಳು, ಅನಾಥ ಮಕ್ಕಳು, ವಿವಿಧ ಶಾಲಾ ಮಕ್ಕಳು, ರೋಗಿಗಳಿಗೆ, ಬಡವರಿಗೆ ನೀಡುತ್ತಾ ಬಂದಿದ್ದೇವೆ.

ನಿಮ್ಮ ಮನೆಯಲ್ಲಿ ನಿಮ್ಮ ತಂದೆ ತಾಯಿ, ಪೋಷಕರಿಗೆ ನೀವೇ ಹೇಳಿ. ಹಾವು ಹಾಲು ಕುಡಿಯುವುದಿಲ್ಲ ಎಂದು ಹೇಳಿರಿ ಎಂದು ನಮ್ಮ ಗುರುಗಳು ತಿಳಿಸಿದ್ದಾರೆ. ಅದೇ ಹಾಲನ್ನು ನಮಗೆ ಕುಡಿಯಲು ಕೊಡಿ ಎಂದು ಕೇಳಿರಿ. ಇದು ಹಾಲನ್ನು ಎರೆಯುವ ಹಬ್ಬವಾಗದೇ ಹಾಲನ್ನು ಕುಡಿಯುವ ಹಬ್ಬವಾಗಿ ಆಚರಿಸಿರಿ. ಎಲ್ಲಾ ಮಠ ಮಾನ್ಯಗಳು, ಸಂಘ ಸಂಸ್ಥೆಗಳೂ ಸಹಾ ಇಂತಹ ಸಮಾಜಮುಖಿ ಕಾರ್ಯವನ್ನು ನಾಡಿನಾದ್ಯಂತ ಮಾಡುತ್ತಾ ಬರುತ್ತಿವೆ. ನಾಗರ ಪಂಚಮಿ ಹಬ್ಬದ ಅಂಗವಾಗಿ ಕಲ್ಲ ನಾಗರಕ್ಕೆ, ಹುತ್ತಕ್ಕೆ ಎರೆಯುವ ಬದಲು ಅದೇ ಹಾಲನ್ನು ನೀವೇ ಕುಡಿದು ಪಂಚಮಿಯನ್ನು ಅರ್ಥಪೂರ್ಣವಾಗಿ ಆಚರಿಸಿರಿ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಶಾಸಕ ಪ್ರೊ. ಲಿಂಗಣ್ಣ, ವಿದ್ಯಾಸಂಸ್ಥೆ ಕಾರ್ಯದರ್ಶಿ ಕೆ.ಎಸ್. ಮಂಜುನಾಥ, ಉದ್ಯಮಿ ಮಹಾಂತೇಶ ಒಣರೊಟ್ಟಿ, ಗೋಪನಾಳ ಅಶೋಕ, ಕುಂಟೋಜಿ ಚನ್ನಪ್ಪ, ರುದ್ರಮ್ಮ, ಶಾಲೆ ಮುಖ್ಯೋಪಾಧ್ಯಾಯರಾದ ಶಾಜಿಯಾ ಬಾನು, ಶಿಕ್ಷಕರಾದ ಶಶಿ ಪಾಟೀಲ್, ಗೀತಾಂಜಲಿ, ಸೋಮ ಶೇಖರ, ದಾಕ್ಷಾಯಿಣಿ, ಸೀಮಾ ಇತರರು ಇದ್ದರು.

## ಹಿಂಜರಿತದ ಭೀತಿ : ಕುಸಿದ ಕಚ್ಚಾ ತೈಲ ಬೇಡಿಕೆ

ನವದೆಹಲಿ, ಆ. 8 – ಆರ್ಥಿಕ ಹಿಂಜರಿತದ ಭೀತಿಯಿಂದಾಗಿ ಕಚ್ಚಾ ತೈಲದ ಬೇಡಿಕೆ ಇಳಿಮುಖವಾಗಿದೆ. ಈ ಹಿನ್ನೆಲೆಯಲ್ಲಿ ತೈಲ ಬೆಲೆ ಇತ್ತೀಚಿನ ತಿಂಗಳುಗಳಲ್ಲಿ ಕಡಿಮೆ ಹಂತಕ್ಕೆ ತಲುಪಿದೆ.

ಬ್ರೆಂಟ್ ಕಚ್ಚಾ ತೈಲದ ಬೆಲೆ ಸೋಮವಾರದಂದು ಬ್ಯಾರಲ್‌ಗೆ 94.18 ಡಾಲರ್‌ಗಳಿಗೆ ಇಳಿಕೆಯಾಗಿದೆ. ಇದು ಕಳೆದ ಫೆಬ್ರವರಿ ನಂತರ ಅತಿ ಕಡಿಮೆ ಮಟ್ಟವಾಗಿದೆ. ಏಪ್ರಿಲ್ 2020ರ ನಂತರ ಇದೇ ಮೊದಲ ಬಾರಿಗೆ ಕಚ್ಚಾ ತೈಲದ ಬೆಲೆ ವಾರದಲ್ಲಿ ಅತಿ ಹೆಚ್ಚಿನ ಇಳಿಕೆ ಕಂಡಿದೆ.

ವಿಶ್ವದ ಅತಿ ದೊಡ್ಡ ತೈಲ ಆಮದು ದೇಶವಾದ ಚೀನ, ಜುಲೈ ತಿಂಗಳಲ್ಲಿ 8.79 ದಶಲಕ್ಷ ಬ್ಯಾರಲ್ ತೈಲವನ್ನು ಪ್ರತಿದಿನ ಆಮದು ಮಾಡಿಕೊಂಡಿದೆ. ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.9.5ರಷ್ಟು ಕಡಿಮೆಯಾಗಿದೆ. ಅಮೆರಿಕದಲ್ಲೂ ತೈಲ ಬೇಡಿಕೆ ಕಡಿಮೆಯಾಗಿದೆ.

# ಮಾರಿಕಾಂಬ ದೇವಸ್ಥಾನದ ಸಭೆ : ಸದಸ್ಯರ ಕಿತ್ತಾಟ



ಸಾಗರ, ಜು. 8- ಇಲ್ಲಿನ ಮಾರಿಕಾಂಬಾ ದೇವಸ್ಥಾನದ ವ್ಯವಸ್ಥಾಪಕ ಸಮಿತಿಗೆ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಯಾವ ರೀತಿ ನಡೆಯಬೇಕು ಎನ್ನುವ ವಿಷಯದ ಕುರಿತು ಭಾನುವಾರ ನಡೆದ ಸಮಿತಿಯ ಸರ್ವ ಸದಸ್ಯರ ಸಭೆಯಲ್ಲಿ ಸದಸ್ಯರು ಪರಸ್ಪರ ಕೈ ಕೈ ಮಿಲಾಯಿಸಿದರು. ಇದರಿಂದ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಇಲ್ಲಿನ ಶೃಂಗೇರಿ ಶಂಕರ ಮಠದಲ್ಲಿ ನಡೆದ ಸಭೆಯಲ್ಲಿ ಒಂದು ಗುಂಪು ಚುನಾವಣೆ ಮೂಲಕ ನೂತನ ಸಮಿತಿಗೆ ನಿರ್ದೇಶಕರನ್ನು ಆಯ್ಕೆ ಮಾಡಬೇಕು ಎಂದು ಪಟ್ಟು ಹಿಡಿದಿತ್ತು. ಮತ್ತೊಂದು ಗುಂಪು ಸಮಿತಿ ಶಿವಮೊಗ್ಗದ ನ್ಯಾಯಾಲಯದಲ್ಲಿ ದಾಖಲಿಸಿರುವ ಸ್ಕೀಂ ದಾವೆಯಲ್ಲಿ ಪ್ರತಿವಾದಿಗಳಾಗಿ ಸೇರಿರುವ 17 ಮಂದಿಯನ್ನು ಒಳಗೊಂಡಂತೆ ನೂತನ ನಿರ್ದೇಶಕರನ್ನು ಆಯ್ಕೆ ಮಾಡಬೇಕು ಎಂದು ಒತ್ತಾಯಿಸಿತು.

ಈ ವಿಷಯದ ಕುರಿತು ಸದಸ್ಯರ ನಡುವೆ ಮಾತಿಗೆ ಮಾತು ಬೆಳೆದು ಸಭೆಯಲ್ಲಿ ಕಾವೇರಿದ ವಾತಾವರಣ ನಿರ್ಮಾಣವಾಗಿತ್ತು.

ಸದಸ್ಯ ಡಿ.ದಿನೇಶ್, 'ನೀವು ಯಾವ 17 ಮಂದಿಯನ್ನು ಸಮಿತಿಗೆ ಸೇರಿಸಿಕೊಳ್ಳಲು ಹೊರಟಿದ್ದೀರೋ ಅವರು ನಿಮ್ಮ ಬಗ್ಗೆ ಕಳೆದ ಸಭೆಯಲ್ಲಿ ಹೀನಾಯವಾಗಿ ಮಾತನಾಡಿದ್ದಾರೆ. ಅಂತವರನ್ನು ಹೇಗೆ ಸೇರಿಸಿಕೊಳ್ಳುತ್ತೀರಿ' ಎಂದು ಪ್ರಶ್ನಿಸಿದಾಗ, ಸಮಿತಿಯ ಪದಾಧಿಕಾರಿಯನ್ನು ಅಶೋಕ್ ಅವರು ತೋಳು ಏರಿಸಿ ದಿನೇಶ್ ಅವರ ಮೇಲೆ ಹಲ್ಲೆ ಮಾಡಲು ಮುಂದಾದರು. ಆಗ ಸಭೆಯಲ್ಲಿದ್ದವರು ಮಧ್ಯೆ ಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು.

ಈ ಹಂತದಲ್ಲಿ ಸಮಿತಿಯ ಕಾರ್ಯದರ್ಶಿ ಬಿ.ಗಿರಿಧರ ರಾವ್, ಸಹ ಕಾರ್ಯದರ್ಶಿ ಎಸ್.ವಿ.ಕೃಷ್ಣಮೂರ್ತಿ, ಚುನಾವಣೆ ನಡೆಸಲು ನಾವು ಸಿದ್ದ ಎಂದು ತಿಳಿಸಿದರು.

ಆದರೆ ಸಭೆಯಲ್ಲಿ ಘರ್ಷಣೆ ನಡೆದಿರುವುದರಿಂದ ಯಾವುದೇ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದ ಸಮಿತಿ ಅಧ್ಯಕ್ಷ ಕೆ.ಎನ್. ನಾಗೇಂದ್ರ ಸಭೆಯಿಂದ ನಿರ್ಗಮಿಸಿದರು.

ಇದಕ್ಕೆ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿ ಸದಸ್ಯರ ಅಭಿಪ್ರಾಯಗಳಿಗೆ ಅನುಗುಣವಾಗಿ ನಿರ್ಣಯ ತೆಗೆದುಕೊಳ್ಳದೇ ಸಭೆಯನ್ನು ಅರ್ಧಕ್ಕೆ ನಿಲ್ಲಿಸಿದ್ದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

## ಜಿಎಂಹೆಚ್ ಪಿಯು ಕಾಲೇಜಿನ ಪ್ರಾಂಶುಪಾಲರಾಗಿ ಪ್ರೊ.ಚಂದ್ರಪ್ಪ



ದಾವಣಗೆರೆ,ಆ.8- ನಗರದ ಜಿಎಂ ಹಾಲಮ್ಮ ಪಿಯು ಕಾಲೇಜಿನ ಪ್ರಾಂಶುಪಾಲರಾಗಿ ಪ್ರೊ ಚಂದ್ರಪ್ಪ ಬಿ. ಬಿ. ಅಧಿಕಾರ ವಹಿಸಿಕೊಂಡರು. ಈ ಹಿಂದೆ ಅವರು ಯಾದಗಿರಿ ಪಿಯು ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ದ್ದರು.

ಸಂಸ್ಥೆಯ ಆಡಳಿತಾಧಿಕಾರಿ ವೈ. ಯು. ಸುಭಾಶ್ಚಂದ್ರ, ಡಾ. ವೈ. ವಿಜಯಕುಮಾರ್, ಡಾ. ಗಿರೀಶ್ ಬೋಳಕಟ್ಟಿ, ಶಿವಕುಮಾರ್, ಶ್ರೀಮತಿ ಶ್ವೇತ ಮರಿಗೌಡರ್, ತೇಜಸ್ವಿ ಕಟ್ಟಿಮನಿ, ದೀಪಕ್ ಅವರುಗಳೂ ಹೂಗುಚ್ಛ ನೀಡುವುದರ ಮೂಲಕ ಅಭಿನಂದನೆಗಳನ್ನು ಸಲ್ಲಿಸಿದರು.

# ಆರೋಗ್ಯವಂತರೇ ದೇಶದ ಸಂಪತ್ತು



**ಮಾಜಿ ಶಾಸಕ ಗುರುಸಿದ್ದನಗೌಡ**

ಜಗಳೂರು, ಆ. 8- ಆರೋಗ್ಯವಂತ ನಾಗರಿಕರೇ ದೇಶದ ನಿಜವಾದ ಸಂಪತ್ತು. ದೇಶದಲ್ಲಿ ಆರೋಗ್ಯವಂತರ ಸಂಖ್ಯೆ ಕ್ಷೀಣಿಸುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಮಾಜಿ ಶಾಸಕ ಟಿ. ಗುರುಸಿದ್ಧನಗೌಡ ಆತಂಕ ವ್ಯಕ್ತಪಡಿಸಿದರು.

ತಾಲ್ಲೂಕಿನ ಸೊಕ್ಕೆ ಗ್ರಾಮದಲ್ಲಿ ಶನಿವಾರ ಸಂಜೀವಿನಿ ಸೂಪರ್ ಸ್ಪೆಷಾಲಿಟಿ ಡೆಂಟಲ್ ಮತ್ತು ಪಾಲಿ ಕ್ಲಿನಿಕ್‌ನ 5ನೇ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ಶಿಬಿರ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವಧಿಯ ಸ್ವಾತಂತ್ರ್ಯ ಪೂರ್ವದಲ್ಲಿ ಬಿದರಕೆರೆ, ಸೊಕ್ಕೆ ಗ್ರಾಮಗಳಲ್ಲಿ ಸರ್ಕಾರಿ ಆಸ್ಪತ್ರೆಗಳು ಆರಂಭವಾಗಿರುವುದು ತಾಲ್ಲೂಕಿಗೆ ಮಾದರಿ ಗ್ರಾಮಗಳಾಗಿವೆ. ಅಂದಿನ ಕಾಲಘಟ್ಟದಲ್ಲಿ ಶಾಸಕರೇ ಗ್ರಾಮಾಭಿವೃದ್ಧಿಗೊಳಿಸಬೇಕೆಂದಿರಲಿಲ್ಲ. ಸ್ಥಳೀಯ ಛೇರ್ಮನ್ ಹಾಗೂ ಗ್ರಾಮಸ್ಥರು ಅಲ್ಲಿನ ವೈಶಿಷ್ಟ್ಯ ಅವಲೋಕಿಸಿ ಸಮಸ್ಯೆಗಳನ್ನು ಪರಿಹರಿಸಲಾಗುತ್ತಿತ್ತು ಎಂದು ಮೆಲುಕು ಹಾಕಿದರು. ದೇಶಕ್ಕೆ ಸಂಪತ್ತು, ಜನಸಂಖ್ಯೆ ಪ್ರಾಮುಖ್ಯವಲ್ಲ. ಪ್ರಥಮವಾಗಿ ಆರೋಗ್ಯವಂತ ನಾಗರಿಕರಾಗಬೇಕು. ಆಯುಷ್ಯ ರೇಖೆಯಿಲ್ಲದ ಹಸ್ತರೇಖೆಗೆ ಏನು ಪ್ರಯೋಜನ ಎಂಬುದು ಬಸವಣ್ಣನವರ ಆಶಯವಾಗಿತ್ತು. ಪ್ರತಿ ಕುಟುಂಬವೂ ಪೌಷ್ಠಿಕ ಆಹಾರಕ್ಕೆ, ಸ್ವಚ್ಛತೆಗೆ ಆದ್ಯತೆ ನೀಡಬೇಕು.

ಮಾಜಿ ಶಾಸಕ ಹೆಚ್.ಪಿ. ರಾಜೇಶ್ ಮಾತನಾಡಿ, ಆಧುನಿಕ ಆಹಾರ ಪದ್ಧತಿ, ನೀರಿನಿಂದ ಹಲವಾರು ರೋಗಗಳು ಉಲ್ಬಣವಾಗುತ್ತಿದ್ದು, ಮನುಷ್ಯ ಶ್ರಮವಿಲ್ಲದ ಯಾಂತ್ರಿಕ ಜೀವನ ತೊರೆಯಬೇಕು ಎಂದರು. ಸಮತೋಲನ ಆಹಾರಕ್ಕಾಗಿ ಸಾಂಪ್ರದಾಯಿಕ ಬೆಳೆಗಳಾದ ಸಜ್ಜೆ, ನವಣೆ, ಆರ್ಕದಂತಹ ಸಿರಿಧಾನ್ಯ ಗಳನ್ನು, ಸ್ವಾಭಾವಿಕವಾಗಿ ಬೆಳೆದ ಸೊಪ್ಪು, ತರಕಾರಿಗಳನ್ನು ಸೇವಿಸಬೇಕು. ಗೋಬಿ ಮಂಚೂರಿ, ಪಾನಿಪೂರಿಯಂತಹ ರಾಸಾಯನಿಕ ಯುಕ್ತ ಆಹಾರ ಪದಾರ್ಥಗಳನ್ನು ಕೈಬಿಡಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಡಾ. ಟಿ.ಜಿ. ರವಿಕುಮಾರ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಲತಾ ಮಲ್ಲಿಕಾರ್ಜುನ್, ಕೆಪಿಸಿಸಿ ಎಸ್ಟಿ ಘಟಕದ ಅಧ್ಯಕ್ಷ ಕೆ.ಪಿ. ಪಾಲಯ್ಯ, ಸಂಜೀವಿನಿ ಡೆಂಟಲ್ ಆಸ್ಪತ್ರೆಯ ಡಾ. ಬಸವಾನಂದ ಮಾತನಾಡಿದರು.

ಈ ಸಂದರ್ಭದಲ್ಲಿ ಮಾಜಿ ಪ್ರಧಾನ ಭೀಮಪ್ಪ, ಡಾ. ಬಿ.ಸಿ. ಮೂಗಪ್ಪ, ಕಲ್ಲೇಶ್ ರಾಜ್ ಪಟೇಲ್, ರಾಜೇಂದ್ರ ಪ್ರಸಾದ್, ಡಾ. ಬಸವರಾಜ್, ಡಾ. ಅಶ್ವತ್ಥ ನಾಯ್ಕ, ಡಾ. ಕವಿತಾ ಬಸವರಾಜ್, ತಾ.ಪಂ. ಮಾಜಿ ಸದಸ್ಯ ಬಸವರಾಜಪ್ಪ, ಕೀರ್ತಿಕುಮಾರ್, ಯಶವಂತಗೌಡ, ಡಾ. ಬಸವಾನಂದ, ಯು.ಜಿ. ಶಿವಕುಮಾರ್ ಮತ್ತಿತರರು ಭಾಗವಹಿಸಿದ್ದರು.

# ಬಿಜೆಪಿ ಸರ್ಕಾರದಿಂದಲೇ 7ನೇ ವೇತನ ಆಯೋಗ ರಚನೆ

## ಶಿಕ್ಷಕರ ಸಂಘದ ಪದಾಧಿಕಾರಿಗಳ ಅಭಿನಂದನಾ ಸಮಾರಂಭದಲ್ಲಿ ವೈ.ಎ.ನಾರಾಯಣಸ್ವಾಮಿ



ದಾವಣಗೆರೆ,ಆ. 8- ಸರ್ಕಾರಿ ನೌಕರರ ಏಳನೇ ವೇತನ ಆಯೋಗವನ್ನು ಬಿಜೆಪಿ ಸರ್ಕಾರವೇ ರಚನೆ ಮಾಡಲಿದೆ ಎಂದು ರಾಜ್ಯ ಸರ್ಕಾರದ ಮುಖ್ಯ ಸಚೇತಕ ವೈ.ಎ.ನಾರಾಯಣಸ್ವಾಮಿ ಹೇಳಿದರು.

ನಗರದ ಸರ್ಕಾರಿ ನೌಕರರ ಸಮುದಾಯ ಮಂದಿರದಲ್ಲಿ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ದಾವಣಗೆರೆ ಜಿಲ್ಲೆಯ ಪದಾಧಿಕಾರಿಗಳ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ನಮ್ಮ ಸರ್ಕಾರವೇ ಶಿಕ್ಷಕರುಗಳ ಸಮಸ್ಯೆ ಬಗೆಹರಿಸುತ್ತದೆ, ಏಕೆಂದರೆ ವಿದ್ಯಾವಂತರೇ ಶಿಕ್ಷಣ ಸಚಿವರಾಗುತ್ತಾರೆ. ಕಾಂಗ್ರೆಸ್ ಸರ್ಕಾರ ಹಾಗೂ ಇತರೆ ಸರ್ಕಾರ ಇದ್ದಾಗ ಶಿಕ್ಷಣ ಸಚಿವರಿಗೂ ಇಲಾಖೆಗೂ ಸಾಮ್ಯತೆ ಇರಲಿಲ್ಲ ಎಂದರು. ಶಿಕ್ಷಣ ಸಮಾಜದಲ್ಲಿ ಸಮಾನತೆ ತರುತ್ತದೆ. ಅಂತಹ ಶಿಕ್ಷಣವನ್ನು ನೀಡುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ನೂತನವಾಗಿ ಆಯ್ಕೆಯಾದ ನಿರ್ದೇಶಕರುಗಳು ನಿರಂತರವಾಗಿ ಅಧಿಕಾರಿಗಳು ಮತ್ತು ಇಲಾಖೆಯ ಸಂಪರ್ಕದಲ್ಲಿದ್ದು ಉತ್ತಮ ಕಾರ್ಯನಿರ್ವಹಿಸಬೇಕೆಂದು ಹೇಳಿದರು.

ಶಾಸಕ ಚಿದಾನಂದ ಎಂ.ಗೌಡ ಮಾತನಾಡಿ. ಶಿಕ್ಷಕರುಗಳ ಕೊಡುಗೆ ದೇಶಕ್ಕೆ ಅಪಾರವಾದದ್ದು, ಬೇರೆ ಯಾವ ಕ್ಷೇತ್ರವೂ ಇಂತಹ ಕೊಡುಗೆ ನೀಡಲಾರದು, ನಿಮ್ಮಗಳ ಯಾವುದೇ ಕೆಲಸವಿರಲಿ ಮಾಡಿಕೊಡುತ್ತೇವೆ ಎಂದರು.

ನಿಕಟಪೂರ್ವ ಅಧ್ಯಕ್ಷ ಎಂ. ಮಂಜುನಾಥ ಸ್ವಾಮಿ ಮಾತನಾಡಿ, ಅನುದಾನಿತ ಶಾಲಾ ಶಿಕ್ಷಕರುಗಳಿಗೆ ಜ್ಯೋತಿ ಸಂಜೀವಿನಿ ಯೋಜನೆ ಜಾರಿ ಮಾಡಿ ಅದಕ್ಕೆ ಶಾಶ್ವತ ಮನ್ನಣೆ ನೀಡಬೇಕು ಹಾಗೂ ನವೀಕರಣದ ಷರತ್ತುಗಳು ಸಡಿಲವಾಗಬೇಕೆಂದರು.

ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಾಲಾಕ್ಷಿ, ಶ್ರೀ ನಿವಾಸ್ ಮಾತನಾಡಿದರು. ವೇದಿಕೆಯಲ್ಲಿ ದ್ವಾರಕೀಶ್ ನಾಯ್ಕ್, ಎಸ್.ಚಂದ್ರಪ್ಪ, ಬಿ.ಆರ್. ಡಿ.ಡಿ. ಹಾಲಪ್ಪ, ರಾಮರೆಡ್ಡಿ, ಪದ್ದಪ್ಪ, ಬಿಇಓ ನಿರಂಜನ್ ಮೂರ್ತಿ, ಅಂಜಣ್ಣ ಸ್ವಾಮಿ ಮತ್ತಿತರರಿದ್ದರು.

## ಭಾರತೀಯ ತೈಲ ನಿಗಮದಿಂದ ಶ್ರೀಲಂಕಾದಲ್ಲಿ ಪೆಟ್ರೋಲ್ ಪಂಪ್

ಕೊಲಂಬೊ, ಆ. 8 – ಭಾರತೀಯ ತೈಲ ನಿಗಮ (ಐ.ಒ.ಸಿ.) ಶ್ರೀಲಂಕಾದಲ್ಲಿ 50 ಪೆಟ್ರೋಲ್ ಪಂಪ್‌ಗಳನ್ನು ತೆರೆಯುವ ಮೂಲಕ ತನ್ನ ಕಾರ್ಯಾಚರಣೆ ವಿಸ್ತರಿಸಲಿದೆ. ಶ್ರೀಲಂಕಾ ಅತಿ ದೊಡ್ಡ ತೈಲ ಬಿಕ್ಕಟ್ಟು ಎದುರಿಸುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ

ತೈಲ ನಿಗಮವು ಸಂಗ್ರಹ ಟ್ಯಾಂಕ್ ಹಾಗೂ ಇತರೆ ಉಪಕರಣಗಳ ಮೇಲೆ ಹೂಡಿಕೆ ಮಾಡಲಿದೆ. ಡೀಲರ್‌ಗಳು ಜಮೀನು ಹಾಗೂ ಇತರೆ ಸೌಲಭ್ಯಗಳ ವೆಚ್ಚ ನಿರ್ವಹಿಸಲಿದ್ದಾರೆ. ಜೂನ್ ನಂತರದಲ್ಲಿ ಆರಂಭವಾದ ತೀವ್ರ ಇಂಧನ ಬಿಕ್ಕಟ್ಟಿನ ಸಂದರ್ಭದಲ್ಲಿ ಲಂಕಾ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಒಂದೇ ಕಾರ್ಯ ನಿರ್ವಹಿಸಿತ್ತು. ಶ್ರೀಲಂಕಾದ ಸಿಲೋನ್ ಪೆಟ್ರೋಲಿಯಂ ಕಾರ್ಪೊ ರೇಷನ್ ಜೂನ್ ಮಧ್ಯಾವಧಿಯಲ್ಲಿ ತೈಲ ಪೂರೈಕೆ ಮಾಡಲು ಸಾಧ್ಯವಾ ಗಿರಲಿಲ್ಲ. ಇದರಿಂದಾಗಿ ಶ್ರೀಲಂಕಾದಲ್ಲಿ ಸಾಕಷ್ಟು ಸಮಸ್ಯೆ ಉಂಟಾಗಿತ್ತು.

# ನುಲಿಯ ಚಂದಯ್ಯನವರ ಜಯಂತಿ ಆಚರಣೆಗೆ ಮನವಿ




ಹರಪನಹಳ್ಳಿ, ಆ. 8- ನುಲಿಯ ಚಂದಯ್ಯನವರ ಜಯಂತಿಯನ್ನು ತಾಲ್ಲೂಕು ಆಡಳಿತದ ವತಿಯಿಂದ ಆಚರಣೆ ಮಾಡಬೇಕೆಂದು ಒತ್ತಾಯಿಸಿ ಅಖಿಲ ಕರ್ನಾಟಕ ಕೊರಚ ಮಹಾಸಂಘ ಹರಪನಹಳ್ಳಿ ತಾಲ್ಲೂಕು ಘಟಕ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದೆ.

ಅಖಿಲ ಕರ್ನಾಟಕ ಕೊರಚ ಸಮುದಾಯವು ಭಾರತ ಸಂವಿಧಾನದ 51ರ ಕಾಯ್ದೆ ಅನ್ವಯ ಸಮುದಾಯದವರು ಮೂಲತಃ ಹಗ್ಗವನ್ನು ನೇದು ಜೀವಿಸುತ್ತಿದ್ದರು. ಈ ನಿಟ್ಟಿನಲ್ಲಿ ಸಮುದಾಯದ ಕುಲ ಕಸುಬನ್ನು ನಾವೂ ಸಹ ಮುಂದುವರೆಸಿಕೊಂಡು ಬಂದಿದ್ದು, ಇದರ ಮಹತ್ವ ಮತ್ತು ಕಾರ್ಯವನ್ನು ಮುಂದಿನ ಪೀಳಿಗೆಗೆ ಮತ್ತು ಸಮಾಜಕ್ಕೆ ತಿಳಿಸಬೇಕಾದ ಜವಾಬ್ದಾರಿ ನಮ್ಮ, ನಿಮ್ಮ ಮೇಲಿದೆ.

ಸರ್ಕಾರ ಈಗಾಗಲೇ ನಮ್ಮ ಸಮುದಾಯದ ಮಹಾನ್ ಪುರುಷ ನುಲಿಯ ಚಂದಯ್ಯನವರ ಜಯಂತಿ ಆಚರಣೆ ಮಾಡಲು ಅನುಮೋದನೆ ಕೊಟ್ಟಿದೆ. ಹಾಗಾಗಿ ತಾಲ್ಲೂಕು ಆಡಳಿತವೂ ಸಹ ನುಲಿಯ ಚಂದಯ್ಯನವರ ಜಯಂತಿ ಕುರಿತು ನಮ್ಮ ಸಮುದಾಯದ ಮುಖಂಡರ ಸಭೆ ಕರೆದು ಚರ್ಚಿಸಿ, ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಸಮಾಜದ ಮುಖಂಡರು ಮನವಿಯಲ್ಲಿ ತಿಳಿಸಿದ್ದಾರೆ.

ಈ ವೇಳೆ ಅಖಿಲ ಕರ್ನಾಟಕ ಕೊರಚ ಮಹಾಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಕೆ. ರಾಮಮೂರ್ತಿ, ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ, ಕಾರ್ಯದರ್ಶಿ ನಾಗಪ್ಪ, ರಾಘವೇಂದ್ರ, ಎಂ. ನಾಗಪ್ಪ, ವಕೀಲರಾದ ಶಿವನಾಗಪ್ಪ ಮತ್ತಿತರರು ಉಪಸ್ಥಿತರಿದ್ದರು.

## ರಾಣೇಬೆನ್ನೂರಿನಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರು, ಆ. 8- ಕೋಡಿಯಾಲ, ಹೊಸಪೇಟೆ, ಕವಲೆತ್ತು, ನಲವಾಗಲು, ಮಾಕನೂರು, ರಾಜನಹಳ್ಳಿ, ನದಿಹರಳಹಳ್ಳಿ, ವಡೇರಹಳ್ಳಿ ಗ್ರಾಮಗಳಿಗೆ ನಾಡಿದ್ದು ದಿನಾಂಕ 10 ರಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.


**ಸಂಚಿತ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**

ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ನಿಟುವಳ್ಳಿ ರಸ್ತೆ, ದಾವಣಗೆರೆ. ಫೋನ್ ; 08192-275317

**ಮಾನ್ಯ ಸದಸ್ಯರುಗಳ ಗಮನಕ್ಕೆ**

**22ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ**

ಸನ್ಮಾನ್ಯ ಸಂಘದ ಸದಸ್ಯರುಗಳೇ, ದಿನಾಂಕ : 13.8.2022 ರ ಶನಿವಾರ ಬೆಳಿಗ್ಗೆ 11.30 ಗಂಟೆಗೆ ಸಂಘದ 22ನೇ ವಾರ್ಷಿಕ ಮಹಾಸಭೆಯನ್ನು **ದಾವಣಗೆರೆ-ಹರಿಹರ ಅರ್ಬನ್ ಕೋ ಆಪ್ ಬ್ಯಾಂಕ್, ಸಹಕಾರ ಸಮುದಾಯ ಭವನದಲ್ಲಿ (ಕಲಾ ಪ್ರಕಾಶ ವೃಂದ, ವಿನೋಬನಗರ)** ಆಯೋಜಿಸಲಾಗಿದೆ. ತಾವೆಲ್ಲರು ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ. ಈಗಾಗಲೇ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದ್ದು, ತಲುಪದೇ ಇರುವ ಸದಸ್ಯರು ಇದನ್ನೇ ಆಹ್ವಾನ ಪತ್ರಿಕೆಯೆಂದು ಪರಿಗಣಿಸಿ, ಸಭೆಗೆ ಹಾಜರಾಗಬೇಕಾಗಿ ತಮ್ಮಲ್ಲಿ ಕಳಕಳಿಯ ಪ್ರಾರ್ಥನೆ.

ಸದಸ್ಯರಿಗೆ ವಿಶೇಷ ಸೂಚನೆ : ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯುಸಿ.ಯಲ್ಲಿ ಶೇಕಡ 85ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಕಾರ್ಯಕಾರಿ ಮಂಡಳಿಯ ಆದೇಶದ ಪರವಾಗಿ
ಸಹಿ/- (ಜೆ. ವಿಜಯಕುಮಾರ್)
ಕಾರ್ಯದರ್ಶಿ

**ವಿ.ಸೂ. : ಸಭೆಯಲ್ಲಿ ಭಾಗವಹಿಸುವ ಸದಸ್ಯರುಗಳು ಕೋವಿಡ್-19 ಇರುವುದರಿಂದ ಮಾಸ್ಕ್ ಧರಿಸಬೇಕು ಮತ್ತು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕೆಂದು ವಿನಂತಿ.**

# ಶ್ರೇಷ್ಠ ಗುರುವಿನ ಮಾರ್ಗದರ್ಶನದಿಂದ ಮಾತ್ರ ಗುರಿ ಮುಟ್ಟಲು ಸಾಧ್ಯ

ದಾವಣಗೆರೆ, ಆ. 8- ನಮ್ಮ ಗುರಿಯು ಸಫಲವಾಗಬೇಕಾದರೆ ಪ್ರತಿಯೊಬ್ಬರೂ ಶ್ರೇಷ್ಠ ಗುರುವಿನ ಮಾರ್ಗದರ್ಶನದಿಂದ ಮಾತ್ರ ಗುರಿಯನ್ನು ಮುಟ್ಟಲು ಸಾಧ್ಯವಾಗುವುದು ಎಂದು ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯ ಸಂಪನ್ನ ವಿ. ಮುತಾಲಿಕ್ ಹೇಳಿದರು.

ನಗರದ ಉದ್ಗೀತ ನಿಲಯದಲ್ಲಿ ಆರೋಹಿ ಸಂಗೀತ ಕಲಾ ಸಂಸ್ಥೆಯವರು ಗುರು ಪೂರ್ಣಿಮೆ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ಸಂಗೀತ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ಅವರು ಮಾತನಾಡಿದರು.

ಒಂದು ನಿರ್ದಿಷ್ಟ ಗುರಿಯ ಹಿಂದೆ ಪ್ರಾಮಾಣಿಕ ಮಾರ್ಗದರ್ಶನ ಮತ್ತು ಶ್ರೀ ಗುರುವಿನ ಶ್ರೀರಕ್ಷೆ ಇದ್ದರೆ ಎಂತಹ ಕಠಿಣ ಸಮಸ್ಯೆಯನ್ನಾದರೂ ಪರಿಹರಿಸಿಕೊಳ್ಳ ಬಹುದು ಎನ್ನುವುದಕ್ಕೆ ಇದು



ನಿದರ್ಶನವಾಗಬಲ್ಲದು ಎಂದರು.

ಪುಟ್ಟರಾಜ ಗವಾಯಿಗಳ ಶಿಷ್ಯರಾದ ಆನಂದ ಆರ್. ಪಾಟೀಲ್ ಇವರು ಮಕ್ಕಳಿಗೆ ಸಂಗೀತವನ್ನು ಶ್ರದ್ಧೆಯಿಂದ ಕಲಿಸುತ್ತಿರುವ ಕ್ರಮವನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಆದರ್ಶ ಯೋಗ ಪ್ರತಿಷ್ಠಾನದ ರಾಘವೇಂದ್ರ ಗುರೂಜಿ ಮಾತನಾಡಿ, ಗುರು ಪೂರ್ಣಿಮೆ ವಿಶೇಷತೆ ಏನೆಂದರೆ, ಗೊತ್ತು, ಗುರಿಯಿಲ್ಲದ ನಮಗೆ ಸರಿ ಯಾದ ಮಾರ್ಗದರ್ಶನದ ಮೂಲಕ ಸನ್ಮಾರ್ಗದ ಸನ್ನಡತೆಯ ದಾರಿಯನ್ನು ತೋರಿಸುವ ಗುರುವಿಗೆ ನಮಿಸಿ, ಕೃತಜ್ಞತೆಯನ್ನು ಅರ್ಪಿಸುವುದು.

**ಸಂಪನ್ನ ಮುತಾಲಿಕ್ ಪ್ರತಿಪಾದನೆ**

ಸಮರ್ಪ ಣಾಭಾವದಿಂದ ಭಕ್ತಿಯೊಂದಿಗೆ ಹೃದಯ ಪೂರ್ವಕವಾಗಿ ನಮಸ್ಕರಿಸುವುದು ಎಂದರು. ಆರೋಹಿ ಸಂಗೀತ ಕಲಾ ಸಂಸ್ಥೆಯ ಸಂಸ್ಥಾಪಕ ಆನಂದ ಆರ್. ಪಾಟೀಲರು ಪ್ರಾಸ್ತಾವಿಕವಾಗಿ ಮಾತನಾಡಿ, ಪುಟ್ಟರಾಜ ಗವಾಯಿಗಳ ಕೃಪಾಶೀರ್ವಾದ ದಿಂದ ಸಂಗೀತದಲ್ಲಿ ಸಾಧನೆ ಮಾಡಲು ಸಾಧ್ಯವಾಯಿತು ಎಂದು ತಿಳಿಸಿದರು.

ಶ್ರೀಮತಿ ಗೀತಾ ಮಾಲತೇಶ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಸಮಾರಂಭ ದಲ್ಲಿ ಎಸ್.ಎಸ್. ಮಹಾವಿದ್ಯಾಲಯದ ಡಾ|| ವಿಜಯಕುಮಾರ್ ಜತ್ತಿ ದಂಪತಿ ಸಂಗೀತಗಾರ ಶರಣಯ್ಯ ಸ್ವಾಮಿ ಚಿಮಣಗೇರೆ, ನಿವೃತ್ತ ಅಭಿಯಂತರ ಕಂಪ್ಲಿ ಗುರುರಾಜ ಆಚಾರ್ ದಂಪತಿ ಉಪಸ್ಥಿತರಿದ್ದರು.

ಸುಮಂತ ಎ. ಹಿರೇಮಠ್, ಅಮೋಘ ಎಂ. ಪವಾರ್, ಸಮಿತಾ ಎಸ್. ಮುತಾಲಿಕ್, ಸುಮಿತ, ಪೃಥ್ವಿ, ಗಗನ್, ಚಂದನ್, ವಿದುಷಿ ಶ್ರೀಮತಿ ಗೀತಾ ಮಾಲತೇಶ್, ವಿನೋದ್, ದುರುಗೇಶ್, ಶರಣಯ್ಯ ಸ್ವಾಮಿ, ಸುರೇಶ ಕೊಪ್ಪಳ ತಬಲಾ, ಮಾಸ್ಟರ್ ಗಗನ್, ಆನಂದ್ ಪಾಟೀಲ್ ವಿಜಯದಾಸರ ಕೃತಿ, ಬಸವಣ್ಣ ನವರ ವಚನದೊಂದಿಗೆ ಸುಶ್ರಾವ್ಯವಾಗಿ ಹಾಡಿ ನೆರೆದವರ ಮನಸೂರೆ ಗೊಂಡರು. ಸಂಗೀತ ಪ್ರೇಮಿ ಸರಾಯೂ ಮುತಾಲಿಕ್ ವಂದಿಸಿದರು. ಕಲಾ ಸಂಸ್ಥೆಯಿಂದ ಗುರೂಜಿ, ಸಂಪನ್ನ ಮುತಾಲಿಕ್, ಶ್ರೀಮತಿ ಅನುರಾಧ ಎಸ್. ಮುತಾಲಿಕ್ ಅವರಿಗೆ ಶಾಲು ಹೊದಿಸಿ ಸನ್ಮಾನಿಸಿದರು.

## ಸುಪ್ರೀಂ ಕೋರ್ಟ್‌ನಿಂದ ಆಶಾಭಾವನೆ ಉಳಿದಿಲ್ಲ ಎಂದು ಸಿಬಾಲ್ ವಿವಾದ

ನವದೆಹಲಿ, ಆ. 8 – ಸುಪ್ರೀಂ ಕೋರ್ಟ್‌ನಿಂದ ಈಗ ಯಾವುದೇ ಆಶಾಭಾವನೆ ಉಳಿದಿಲ್ಲ ಎಂದು ರಾಜ್ಯಸಭಾ ಸದಸ್ಯ ಹಾಗೂ ಹಿರಿಯ ವಕೀಲ ಕಪಿಲ್ ಸಿಬಾಲ್ ಹೇಳಿರುವುದು ವಿವಾದಕ್ಕೆ ಕಾರಣವಾಗಿದೆ.

ಸಿಬಾಲ್ ಹೇಳಿಕೆ ನ್ಯಾಯಾಂಗ ನಿಂದನೆ ಮಾಡುವಂಥದ್ದು ಎಂದು ಅಖಿಲ ಭಾರತ ವಕೀಲರ ಒಕ್ಕೂಟ ಹೇಳಿದೆ. ತಮ್ಮ ಪರವಾಗಿ ತೀರ್ಪು ಬರಲಿಲ್ಲ ಎಂಬ ಕಾರಣಕ್ಕೆ ಪ್ರತಿಪಕ್ಷದ ನಾಯಕ ಸಂವಿಧಾನಿಕ ಸಂಸ್ಥೆ ಮೇಲೆ ದಾಳಿ ನಡೆಸುತ್ತಿರುವುದು ಇಡೀ ದೇಶಕ್ಕೆ ನೋವಿನ ಸಂಗತಿ ಎಂದು ಕಾನೂನು ಸಚಿವ ಕಿರಣ್ ರಿಜಿಜು ಹೇಳಿದ್ದಾರೆ.

ಸಿಬಾಲ್ ವಿರುದ್ಧ ನ್ಯಾಯಾಂಗ ನಿಂದನೆ ಕ್ರಮ ತೆಗೆದುಕೊಳ್ಳಲು ಅನುಮತಿ ನೀಡಬೇಕೆಂದು ಇಬ್ಬರು ವಕೀಲರು ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರ ಬಳಿ ಪ್ರತ್ಯೇಕ ಅರ್ಜಿ ದಾಖಲಿಸಿದ್ದಾರೆ. ಅಕ್ರಮ ಹಣ ಕಾಯ್ದೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿದ ತೀರ್ಪನ್ನು ಸಿಬಾಲ್ ಟೀಕಿಸಿದ್ದಾರೆ. ಶನಿವಾರ ಸಮಾರಂಭವೊಂದರಲ್ಲಿ ಮಾತನಾಡುತ್ತಿದ್ದ ಸಿಬಾಲ್, ನ್ಯಾಯಾಂಗದಿಂದ ತಮಗೆ ಯಾವುದೇ ಆಶಾಭಾವನೆ ಉಳಿದಿಲ್ಲ. ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯ ಸಿಗುತ್ತದೆ ಎಂಬುದು ತಪ್ಪು ಕಲ್ಪನೆ ಎಂದಿದ್ದರು.

ಸೂಕ್ಷ್ಮ ಪ್ರಕರಣಗಳನ್ನು ಈಗ ಸುಪ್ರೀಂ ಕೋರ್ಟ್‌ನ ಆಯ್ದ ನ್ಯಾಯಮೂರ್ತಿಗಳಿಗೆ ವಹಿಸಲಾಗುತ್ತಿದೆ. ತೀರ್ಪು ಏನಾಗಿರಲಿದೆ ಎಂಬುದು ವಕೀಲ ಸಮುದಾಯಕ್ಕೆ ಸಾಮಾನ್ಯವಾಗಿ ಗೊತ್ತಿರುತ್ತದೆ ಎಂದವರು ಹೇಳಿದ್ದರು.

## ಬಾಂಗ್ಲಾದಲ್ಲಿ ಇಂಧನ ಬೆಲೆ ಏರಿಕೆ

(1ನೇ ಪುಟದಿಂದ) ಬೆಲೆ ಏರಿಕೆ ವಾಪಸ್ ಪಡೆಯುವಂತೆ ಒತ್ತಾಯಿಸಿದ್ದಾರೆ. ರಷ್ಯಾ - ಉಕ್ರೇನ್ ಸಮರದ ಕಾರಣದಿಂದಾಗಿ ತೈಲ ಬೆಲೆಯಲ್ಲಿ ತೀವ್ರ ಏರಿಕೆಯಾಗಿದೆ.

ಜಾಗತಿಕವಾಗಿ ತೈಲ ಬೆಲೆ ತೀವ್ರ ಏರಿಕೆ ಕಂಡಿತ್ತಾದರೂ, ಇತ್ತೀಚಿನ ದಿನಗಳಲ್ಲಿ ಆರ್ಥಿಕ ಹಿಂಜರಿತದ ಕಳವಳದಿಂದಾಗಿ ಬೆಲೆಗಳು ಇಳಿಮುಖವಾಗಿವೆ. ತೈಲ ಬೆಲೆ ಏರಿಕೆಯಾದರೂ ಬಾಂಗ್ಲಾದೇಶ ಸರ್ಕಾರ ಮಾರಾಟ ಬೆಲೆ ಹೆಚ್ಚಿಸದೇ ಸಬ್ಸಿಡಿ ನೀಡುತ್ತಿತ್ತು. ಸಬ್ಸಿಡಿ ಹೊರೆಯಿಂದಾಗಿ ಹಣದುಬ್ಬರ ದರ ಶೇ.7ಕ್ಕೂ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಬಾಂಗ್ಲಾ ಸರ್ಕಾರ ಬೆಲೆ ಏರಿಕೆಗೆ ಮುಂದಾಗಿದೆ.

ಬಾಂಗ್ಲಾದೇಶ ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ವೇಗದ ಬೆಳವಣಿಗೆ ಕಾಣುತ್ತಿರುವ ದೇಶವಾಗಿದೆ. ಆದರೆ, ಏರುತ್ತಿರುವ ಇಂಧನ ಹಾಗೂ ಆಹಾರ ಬೆಲೆಗಳಿಂದಾಗಿ ಹಣದುಬ್ಬರದ ಮೇಲೆ ಒತ್ತಡ ಬೀಳುತ್ತಿದೆ. ಐ.ಎಂ.ಎಫ್. ಸೇರಿದಂತೆ ಹಲವಾರು ಜಾಗತಿಕ ಸಂಸ್ಥೆಗಳಿಂದ ಬಾಂಗ್ಲಾದೇಶ ಸಾಲ ಪಡೆಯುತ್ತಿದೆ. ಪೆಟ್ರೋಲ್ ಬೆಲೆಯನ್ನು ಶೇ.51.2ರಷ್ಟು ಹೆಚ್ಚಿಸಿ 130 ಟಾಕಾ (108 ರೂಪಾಯಿ)ಗೆ ನಿಗದಿ ಪಡಿಸಲಾಗಿದೆ. ಡೀಸೆಲ್ ಹಾಗೂ ಸೀಮೆಎಣ್ಣೆ ಬೆಲೆಗಳನ್ನು ಶೇ.42.5ರಷ್ಟು ಹೆಚ್ಚಿಸಲಾಗಿದೆ.

ಇಂಧನ ಬೆಲೆಗಳ ಜೊತೆಗೆ ಅಕ್ಕಿ, ಬೇಳೆ, ತೈಲ, ಉಪ್ಪು, ಬಟ್ಟೆ ಹಾಗೂ ಇತರೆ ದಿನಬಳಕೆ ವಸ್ತುಗಳ ಬೆಲೆ ಏರಿಕೆಯಾಗಿದೆ.

ಬಾಂಗ್ಲಾದೇಶದ ವಿದೇಶಿ ವಿನಿಮಯ ಕರಗುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಐಷಾರಾಮಿ ವಸ್ತುಗಳ ಆಮದಿನ ಮೇಲೆ ನಿರ್ಬಂಧ ಹೇರಿದೆ. ಡೀಸೆಲ್ ಆಧರಿತ ವಿದ್ಯುತ್ ಘಟಕಗಳನ್ನು ಮುಚ್ಚುತ್ತಿದೆ. ಕಳೆದ ಆರು ತಿಂಗಳಲ್ಲಿ ಬಾಂಗ್ಲಾದೇಶ ಪೆಟ್ರೋಲಿಯಂ ನಿಗಮ 85 ದಶಲಕ್ಷ ಡಾಲರ್‌ಗಳ ನಷ್ಟ ಅನುಭವಿಸಿದೆ. ಈ ಹಿನ್ನೆಲೆಯಲ್ಲಿ ತೈಲ ಬೆಲೆ ಪರಿಷ್ಕರಣೆ ಅಗತ್ಯವಾಗಿದೆ ಎಂದು ಬಾಂಗ್ಲಾದ ಇಂಧನ ಸಚಿವ ನಸ್ರುಲ್ ಹಮೀದ್ ಹೇಳಿದ್ದಾರೆ.

## ಹೊನ್ನಾಳಿಗೆ ಇಂದು ಕಂದಾಯ ಸಚಿವ ಆರ್. ಅಶೋಕ್

ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಉಪಾಧ್ಯಕ್ಷರೂ ಆದ ಕಂದಾಯ ಸಚಿವ ಆರ್.ಅಶೋಕ್ ಇಂದು ಮಧ್ಯಾಹ್ನ 1 ಗಂಟೆಗೆ ಹೊನ್ನಾಳಿಗೆ ಆಗಮಿಸುವರು. ನಂತರ ಹೊನ್ನಾಳಿ ತಾಲ್ಲೂಕಿನ ಮಳೆಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವರು. ನಂತರ ಮಧ್ಯಾಹ್ನ 3.30ಕ್ಕೆ ಹೊನ್ನಾಳಿಯಿಂದ ಚಿತ್ರದುರ್ಗಕ್ಕೆ ಪ್ರಯಾಣಿಸುವರು.

## ಮನೆ ಹಾನಿ : ಹರೀಶ್ ಭೇಟಿ



**ಮಲೇಬೆನ್ನೂರು**

ಮಲೇಬೆನ್ನೂರು, ಆ.8- ಮಳೆ ಯಿಂದಾಗಿ ಪಟ್ಟಣದಲ್ಲಿ ಗೋಡೆ ಕುಸಿದು ಬಿದ್ದಿರುವ ಮನೆಗಳಿಗೆ ಮಾಜಿ ಶಾಸಕ ಬಿ.ಪಿ. ಹರೀಶ್ ಭೇಟಿ ನೀಡಿ ವೀಕ್ಷಿಸಿ, ಪರಿಹಾರ ಕೊಡಿಸುವ ಭರವಸೆ ನೀಡಿದರು. ತಾ. ಗ್ರಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಪುರಸಭೆ ನಾಮಿನಿ ಸದಸ್ಯರಾದ ಪಿ.ಆರ್. ರಾಜು, ಎ.ಕೆ. ಲೋಕೇಶ್ ಹಾಜರಿದ್ದರು.

## ಮೌಲ್ಯ ಎತ್ತಿ ಹಿಡಿಯುವಲ್ಲಿ ವಿದ್ಯಾರ್ಥಿನಿಯರ ಶ್ರಮ ಅಗತ್ಯ

### ಮಹಿಳಾ ಸೇವಾ ಸಮಾಜದ ಕಾಲೇಜಿನ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಗೌರಮ್ಮ ಕರೆ



ದಾವಣಗೆರೆ, ಆ.8- ಆಧುನಿಕ ಜೀವನ ಶೈಲಿಯ ಬರದಲ್ಲಿ ಮಾನವೀಯ ಮೌಲ್ಯಗಳು ಕಣ್ಮರೆಯಾಗುತ್ತಿವೆ, ಈಗಿನ ವಿದ್ಯಾರ್ಥಿನಿಯರು ಮಾನವೀಯ ಮೌಲ್ಯವನ್ನು ಎತ್ತಿ ಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ಮಹಿಳಾ ಸೇವಾ ಸಮಾಜದ ನಿರ್ದೇಶಕರಾದ ಗೌರಮ್ಮ ಕರೆ ನೀಡಿದರು.

ನಗರದ ಮಹಿಳಾ ಸೇವಾ ಸಮಾಜ ಪ್ರಥಮ ದರ್ಜೆ ಕಾಲೇಜಿನಲ್ಲಿ ಈಚೆಗೆ ಜರುಗಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಅವರು, ಸಂಸ್ಕೃತಿ ಕಾಪಾಡುವಲ್ಲಿ ಮಹಿಳೆಯ ಪಾತ್ರ ಅಮೂಲ್ಯವಾಗಿದೆ ಎಂದರು. ಈ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪದವಿ ವಿದ್ಯಾರ್ಥಿಗಳ ಉಡುಪುಗಳು ಭಾರತೀಯ ಪರಂಪರೆಯ ಸಂಕೇತವಾಗಿತ್ತು. ಎಲ್ಲ ರಾಜ್ಯದ ಸಾಂಪ್ರದಾಯಿಕ ಉಡುಪನ್ನು ಧರಿಸಿಕೊಂಡು ಪದವಿ ವಿದ್ಯಾರ್ಥಿನಿಯರು ಕಾಲೇಜ್ ಆವರಣದ ತುಂಬೆಲ್ಲಾ ಹಬ್ಬದ ಸಡಗರವನ್ನೇ ಸೃಷ್ಟಿಸಿದ್ದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಹಿಳಾ ಸೇವಾ ಸಮಾಜದ ಕಾರ್ಯದರ್ಶಿ ನೀಲಗುಂದ ಜಯಮ್ಮ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿನಿಯರಲ್ಲಿ ಹೊಸತೊಂದನ್ನು ಸಾಧಿಸುವ ಕೆಚ್ಚು ಹುಟ್ಟಿಕೊಳ್ಳಬೇಕು, ನಾಡಿನ ವೀರ ಮಹಿಳೆಯರ ಸಾಹಸ ಮತ್ತು ಉತ್ತಮ ಮೌಲ್ಯಗಳನ್ನು ವಿದ್ಯಾರ್ಥಿನಿಯರು ಅಳವಡಿಸಿಕೊಳ್ಳಬೇಕು. ಉತ್ತಮ ಸಂಸ್ಕೃತಿಯಿಂದ ಉತ್ತಮ ಸಂಸ್ಕಾರ ಪಡೆಯಬಹುದು ಎಂದು ತಿಳಿಸಿದರು.

ಮಹಿಳಾ ಸೇವಾ ಸಮಾಜದ ನಿರ್ದೇಶಕರಾದ ನೀಲಮ್ಮ, ಸುಮ, ದಿವ್ಯ ಜಂಬಗಿ, ಸ್ಮಿತ ಚಿಗಟೇರಿ ಮತ್ತು ಐ.ಕೆ. ಮಂಜುಳಾ, ಪ್ರಾಂಶುಪಾಲ ಎಂ. ಎಚ್. ಪ್ರಸನ್ನ ರೆಡ್ಡಿ ಮತ್ತು ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರವಿ ಮತ್ತಿತರರು ಉಪಸ್ಥಿತರಿದ್ದರು.

## ಮಾಜಿ ಸೈನಿಕರ ಮಕ್ಕಳಿಗೆ ಶಿಷ್ಯ ವೇತನಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಆ 8- ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳಲ್ಲಿ ಒಂದನೇ ತರಗತಿಯಿಂದ ಅಂತಿಮ ಪದವಿ ಅಥವಾ ಡಿಪ್ಲೋಮಾ ಮತ್ತು ವೃತ್ತಿಪರ ಪದವಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕದ ಮೂಲ ನಿವಾಸಿ ಮಿಲಿಟರಿ ಪಿಂಚಣಿದಾರ ಮಾಜಿ ಸೈನಿಕರ ಮಕ್ಕಳಿಗೆ (ಅಧಿಕಾರಿಗಳನ್ನು ಹೊರತುಪಡಿಸಿ) ಶಿಷ್ಯವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಒಂದನೇ ತರಗತಿಯಿಂದ ಅಂತಿಮ ಪದವಿ ಅಥವಾ ಡಿಪ್ಲೋಮಾ ವ್ಯಾಸಂಗ ಮಾಡುತ್ತಿರುವವರು ಅ. 30 ಮತ್ತು ವೃತ್ತಿಪರ ಪದವಿ ವ್ಯಾಸಂಗ ಮಾಡುತ್ತಿರುವವರು ನ. 30 ರೊಳಗಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಕಚೇರಿ ಶಿವಮೊಗ್ಗ ಇಲ್ಲಿಗೆ ಸಲ್ಲಿಸಬೇಕು. ಮಾಹಿತಿಗಾಗಿ ಶಿವಮೊಗ್ಗ ಕಚೇರಿಯ ದೂರವಾಣಿ ಸಂಖ್ಯೆ 08182-220925 ಯನ್ನು ಸಂಪರ್ಕಿಸಬಹು ದೆಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರು (ಪ್ರಭಾರ) ತಿಳಿಸಿದ್ದಾರೆ.

## ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ನಂಜನಗೌಡ ಅಧ್ಯಕ್ಷ



ಹರಪನಹಳ್ಳಿ, ಆ.8- ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಅಧ್ಯಕ್ಷರಾಗಿ ಪಟ್ಟಣದ ಸಹಕಾರಿ ಧುರೀಣ ಜಿ. ನಂಜನಗೌಡ ಅವರು ಆಯ್ಕೆಯಾಗಿದ್ದಾರೆ. ಅಧ್ಯಕ್ಷರಾಗಿ ಆಯ್ಕೆಯಾದ ಜಿ.ನಂಜನಗೌಡ ಅವರಿಗೆ ಪಟ್ಟಣದ ಆದರ್ಶ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

ಈ ವೇಳೆ ಆದರ್ಶ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ಅಧ್ಯಕ್ಷ ಕೆ.ಚಂದ್ರೇಗೌಡ, ಉಪಾಧ್ಯಕ್ಷರಾದ ರೇಖಾ ಮಲ್ಲಿಕಾರ್ಜುನ್, ನಿರ್ದೇಶಕರಾದ ಮತ್ತಿಹಳ್ಳಿ ಅಜ್ಜಣ್ಣ, ಬಿ.ಕೆ.ಪ್ರಕಾಶ್, ಕೆ.ಎಂ. ಮಂಜುನಾಥ್, ಅಂಬುಜಾ ರಾಮಪ್ಪ, ಹೆಚ್.ಎ. ವೇಣುಗೋಪಾಲ್, ಸಹನ ಗೊಂಗಡಿ, ಎಸ್.ಎಂ. ವೀರಭದ್ರಯ್ಯ, ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್, ಬಿಜೆಪಿ ತಾಲ್ಲೂಕು ಉಪಾಧ್ಯಕ್ಷ ನಿಟ್ಟೂರು ಸಣ್ಣ ಹಾಲಪ್ಪ, ಮುಖಂಡರಾದ ಎಂ.ಪಿ.ನಾಯ್ಕ, ಗಂಗಾಧರ ಗುರುಮಠ, ರೇವನಗೌಡ್ರು, ಲಿಂಗನಗೌಡ್ರು, ಜೆ. ಓಂಕಾರಗೌಡ್ರು, ಬಿ.ವೈ. ವೆಂಕಟೇಶ್, ಚನ್ನನಗೌಡ್ರು, ಉದಯಕುಮಾರ್ ಸೇರಿದಂತೆ ಇತರರು ಇದ್ದರು.

## ಭಾರತಕ್ಕೆ 4ನೇ ಸ್ಥಾನ

(1ನೇ ಪುಟದಿಂದ) ಏಳು ಬಂಗಾರದ ಪದಕ ಪಡೆದಿತ್ತು.

ಪಂದ್ಯಾವಳಿಯಲ್ಲಿ ಭಾರತ 22 ಬಂಗಾರ, 16 ಬೆಳ್ಳಿ ಹಾಗೂ 23 ಕಂಚಿನ ಪದಕ ಪಡೆದಿದೆ. ಆಸ್ಟ್ರೇಲಿಯಾ 67 ಬಂಗಾರದ ಪದಕಗಳೊಂದಿಗೆ ಮೊದಲ ಸ್ಥಾನದಲ್ಲಿದೆ.

## ಪತ್ರಕರ್ತರ ಮೇಲಿನ ಹಲ್ಲೆಗೆ ಕಾರ್ಯನಿರತ ಪತ್ರಕರ್ತರ ಸಂಘ ಖಂಡನೆ

ದಾವಣಗೆರೆ, ಆ.8- ಕೋಲಾರ ಪತ್ರಕರ್ತರ ಮೇಲೆ ಮಾಜಿ ಸ್ಪೀಕರ್ ಕೆ.ಆರ್. ರಮೇಶ್‌ಕುಮಾರ್ ನಡೆಸಿರುವ ಹಲ್ಲೆ ಪ್ರಕರಣವನ್ನು ಖಂಡಿಸಿ, ದಾವಣಗೆರೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಉಪವಿಭಾಗಾಧಿಕಾರಿಗಳ ಮುಖೇನ ಮುಖ್ಯಮಂತ್ರಿಗಳಿಗೆ ನಿನ್ನೆ ಲಿಖಿತವಾಗಿ ಮನವಿ ಪತ್ರ ಸಲ್ಲಿಸಲಾಯಿತು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ ಮಾತನಾಡಿ, ಕೋಲಾರ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಏರ್ಪಾಡಾಗಿದ್ದ ಕಾರ್ಯಕ್ರಮದ ವರದಿ ಮಾಡಲು ತೆರಳಿದ್ದ ಕನ್ನಡಪ್ರಭ ಮತ್ತು ಸಂಯುಕ್ತ ಕರ್ನಾಟಕದ ವರದಿಗಾರರ ಮೇಲೆ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಹಲ್ಲೆ



ಮಾಡಿರುವುದನ್ನು ಖಂಡಿಸಿದರು.

ಮುತ್ಸದ್ದಿ ರಾಜಕಾರಣಿ ಕೆ.ಆರ್. ರಮೇಶ್ ಕುಮಾರ್ ಅವರು ತಾಳ್ಮೆಯನ್ನು ಕಳೆದುಕೊಳ್ಳದೇ, ತಮ್ಮ ಸ್ಥಾನದ ಜವಾಬ್ದಾರಿ ಮರೆತು ಪತ್ರಕರ್ತರ ಮೇಲೆ ಹಲ್ಲೆ ಮಾಡಿರುವುದು ಪ್ರಜಾಪ್ರಭುತ್ವದ ವಿರೋಧಿ ನಡೆಯಾಗಿದೆ ಎಂದು ಹೇಳಿದ ಮಂಜುನಾಥ, ಪತ್ರಕರ್ತರ ಮೇಲಿನ ಇಂತಹ ದೌರ್ಜನ್ಯಗಳನ್ನು ಕಾರ್ಯನಿರತ ಪತ್ರಕರ್ತರ ಸಂಘವು ಸಹಿಸುವುದಿಲ್ಲ. ಇದೇ ರೀತಿ ಮುಂದುವರೆದಲ್ಲಿ ಹಂತ-ಹಂತವಾದ ಹೋರಾಟಗಳನ್ನು ರೂಪಿಸಬೇಕಾದೀತು ಎಂದು ಸರ್ಕಾರವನ್ನು ಎಚ್ಚರಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್ ಮಾತನಾಡಿ, ರಮೇಶ್ ಕುಮಾರ್ ಅವರು ರಾಜಕಾರಣದಲ್ಲಿ ಅನುಭವವಿರುವಂತಹ ವ್ಯಕ್ತಿಯಾಗಿದ್ದು, ಈ ರೀತಿ ಹಲ್ಲೆ ಮಾಡಿರುವುದು ಸರಿಯಲ್ಲ. ಕೂಡಲೇ ಅವರು ಪತ್ರಕರ್ತರ ಕ್ಷಮೆಯಾಚಿಸಬೇಕು. ಮುಖ್ಯಮಂತ್ರಿಗಳು ಅವರ ಮೇಲೆ ಕಾನೂನು ಶಿಸ್ತು ಕ್ರಮ ಕೈಗೊಳ್ಳಬೇಕು. ಪದೇ ಪದೇ ಪತ್ರಕರ್ತರ ಮೇಲೆ ಹಲ್ಲೆ ನಡೆಯುತ್ತಿದ್ದು, ಇದರ ಬಗ್ಗೆ ಸೂಕ್ಷ್ಮವಾಗಿ ಗಮನಹರಿಸಿ ಪತ್ರಕರ್ತರ ಮೇಲೆ ಹಲ್ಲೆ ನಡೆಸದಂತೆ ಕಾನೂನು ಜಾರಿಗೆ ತರಬೇಕೆಂದು ಒತ್ತಾಯಿಸಿದರು.

ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ.ಏಕಾಂತಪ್ಪ, ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷರಾದ ಹೆಚ್.ಎನ್. ಪ್ರಕಾಶ್, ಕಾರ್ಯದರ್ಶಿಗಳಾದ ಜೆ.ಎಸ್. ವೀರೇಶ್, ಜಿ.ಆರ್. ನಿಂಗೋಜಿರಾವ್, ಖಜಾಂಚಿ ಎನ್.ವಿ.ಬದರಿನಾಥ್, ಸದಸ್ಯರಾದ ಸಿ.ವೇದಮೂರ್ತಿ, ಇಂಧುಧರ ನಿಶಾನಿಮಠ್, ಎನ್. ಕೃಷ್ಣೋಜಿರಾವ್, ಬಿ. ಎಸ್. ಮುದ್ದಯ್ಯ, ಹಿರಿಯ ಪತ್ರಕರ್ತ ಎಸ್. ಕೆ.ಒಡೆಯರ್, ವಿಜಯ ಜಾಧವ್, ಭಾರತಿ, ಕೃಷ್ಣ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.


**ಸೈಟ್ ಮಾರಾಟಕ್ಕೆ (ಬಂಗ್ಲೆ)**
ಶಾಮನೂರು ಶಿವ ಪಾರ್ವತಿ ಬಡಾವಣೆ
50x100 ಪೂರ್ವ, 40x60 ಪೂರ್ವ, 80x60 ಪೂರ್ವ
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
(ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ವ್ಯಾಪಾರ)

**ಮನೆಗಳು ಮಾರಾಟಕ್ಕಿವೆ**
ವಿದ್ಯಾನಗರ ತರಳಬಾಳು ಬಡಾವಣೆ
40x40 ಪೂರ್ವ ಡ್ಯೂಪ್ಲೆಕ್ಸ್ ಹೌಸ್,
ರಂಗನಾಥ ಬಡಾವಣೆಯಲ್ಲಿ
25x30 ಪೂರ್ವ ಮೇಲೆ - ಕೆಳಗೆ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಸೈಟ್ ಮಾರಾಟಕ್ಕೆ**
SHAMANUR DOLLERS COLONY
30X45 ಪೂರ್ವ, 30X45 ವೆಸ್ಟ್, 60X45 ಪೂರ್ವ, 60X50 ಉತ್ತರ, 30X50 ಉತ್ತರ, 40X55 ಉತ್ತರ
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409

**WANTED**
1. Receptionist Cum Computer Operator
2. Lab Technician any Diploma in Laboratory Tech
3. X ray Technician
Shilpa Diagnostics
MCC B Block,
Near Swimming Pool, Davangere.
98440 65638

**ಕೆಲಸಕ್ಕೆ ಬೇಕಾಗಿದ್ದಾರೆ**
ಮಹಿಳಾ ಆಯಾ-1, ಪುರುಷ ಆಯಾ - 1
ಕಂಪ್ಯೂಟರ್ ಮತ್ತು ವಾಹನ ಚಾಲಕ ಪುರುಷ - 1
ಪಿಗ್ಮಿ ಕಲೆಕ್ಷನ್ ಪುರುಷ -1
ಶ್ರೀ ಮೃತ್ಯುಂಜಯ ಸ್ಕೂಲ್ ಆಫ್ ನರ್ಸಿಂಗ್,
ಕೆ.ಟಿ.ಜೆ. ನಗರ, 18ನೇ ಕ್ರಾಸ್, ದಾವಣಗೆರೆ 02.
94488 73558, 91139 25620

**ಬೇಕಾಗಿದ್ದಾರೆ**
'ಜನತಾವಾಣಿ' ದಿನಪತ್ರಿಕೆಯಲ್ಲಿ ರಾತ್ರಿ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನವಿರುವ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಭೇಟಿ ಸಮಯ : ಬೆಳಿಗ್ಗೆ 11 ರಿಂದ ಸಂಜೆ 5
ಫೋ. 08192 254736

**ಓಂ ಸಾಯಿ**
ಬೆಣ್ಣೆ ದೋಸೆ & ಗೀ ದೋಸೆ
ಕಾರ್ನರ್ 4ನೇ ಮೇನ್,
ಪಿ.ಜೆ. ಬಡಾವಣೆ ದಾವಣಗೆರೆ.
81052 83114

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
63647 83999

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ ಮತ್ತು ಆಯಾ ಬೇಕಾಗಿದ್ದಾರೆ. ವಸತಿ ವ್ಯವಸ್ಥೆ ಇರುತ್ತದೆ.
ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
ಮೊ: 98450-35710
7760739990

**WANTED**
Sales and Marketing Executive for FMCG distribution
Salary: Rs. 15000 + ESIC benefits.
Also Wanted billing executive and helpers for swad hypermart
Salary : Rs. 5000 to Rs. 10000 + ESIC benefits
98447 42758

**ಸೈಟುಗಳು ಮಾರಾಟಕ್ಕಿವೆ**
ಹರಿಹರ ನಗರದಲ್ಲಿ ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ. Rs.1099 sq.ft ಹಾಗೂ ಸುಲಭ ಕಂತಿನಲ್ಲಿ ಲಭ್ಯ. 30×40, 30×50
98441 24217, 94481 55202
86603 11021, 93431 10009

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ
ಸಂಬಳ : 10,000 /-
08192-261003
99161 43003, 99012 36525

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೋರಿಯರ್ ಸೌಲಭ್ಯವಿದೆ.
91084 18233, 97432 17566

**BUILDING FOR RENT**
(40x60 sq ft) Suitable for Godown or Industries Behind Sonalika Tractors and Opp. Jain Bajaj, P.B. Road, Davangere.
70225 94584, 98457 07843

**ಸಾರ್ವಜನಿಕ ಪ್ರಕಟಣೆ**
ಈ ಕೆಳಕಂಡ ಪ್ರಕಟಣೆದಾರರು ಈ ಮುಖೇನ ಸಾರ್ವಜನಿಕ ಪ್ರಕಟಣೆ ನೀಡುವುದೇನೆಂದರೆ,
ಹರಿಹರ ತಾಲ್ಲೂಕು, ವಡೇರಬಸಾಪುರ ಗ್ರಾಮದ ರಿ ಸರ್ವೆ ನಂ. 51ರ ಪೈಕಿ ವಿಸ್ತೀರ್ಣ ಎಕರೆ-1, ಗುಂಟೆ-01ವುಳ್ಳ ಜಮೀನಿನ ಕ್ರಯಪತ್ರದ ನಂ.3132/2014-15, ದಿನಾಂಕ 18.10.2014 ವುಳ್ಳ ಮೂಲ ಪ್ರತಿಯನ್ನು ಜೆರಾಕ್ಸ್ ಮಾಡಿಸಲು ದಿನಾಂಕ 15.6.2022ರಂದು ಮಲೇಬೆನ್ನೂರಿನ ಎಸ್.ಹೆಚ್. ರಸ್ತೆಯಲ್ಲಿರುವ ಜೆರಾಕ್ಸ್ ಅಂಗಡಿ ಒಂದಕ್ಕೆ ಸದ್ರಿ ಸ್ವತ್ತಿನ ಮಾಲೀಕರಾದ ಹೆಚ್.ಸೈಯದ್ ಖಲೀಲ್ ಬಿನ್ ಲೇಟ್ ಸೈಯದ್ ಖಾದರ್ ಆದ ನಾನು ತೆಗೆದುಕೊಂಡು ಹೋಗಿ ಬರುವಾಗ, ರಸ್ತೆಯಲ್ಲಿ ಸದ್ರಿ ದಸ್ತಾವೇಜು ಇದ್ದಂತಹ ಲಕೋಟೆಯನ್ನು ಕಳೆದುಕೊಂಡಿರುತ್ತೇನೆ. ಈ ಬಗ್ಗೆ ದಿನಾಂಕ 8.8.2022ರಂದು ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ Lost Report No. 0288120/2022ರ, ಪ್ರಕಾರ ದೂರು ದಾಖಲು ಮಾಡಿರುತ್ತೇನೆ. ಹಾಗೂ,
ಹರಿಹರ ತಾಲ್ಲೂಕು, ವಡೇರಬಸಾಪುರ ಗ್ರಾಮದ ರಿ. ಸರ್ವೆ ನಂ. 51ರ ಪೈಕಿ ವಿಸ್ತೀರ್ಣ ಎಕರೆ-1 ಗುಂಟೆ-00 ವುಳ್ಳ ಜಮೀನಿನ ಕ್ರಯಪತ್ರದ ನಂ.3133/2014-15, ದಿನಾಂಕ 18.10.2014ವುಳ್ಳ ಮೂಲ ಪ್ರತಿಯನ್ನು ಜೆರಾಕ್ಸ್ ಮಾಡಿಸಲು ದಿನಾಂಕ 15.6.2022ರಂದು ಮಲೇಬೆನ್ನೂರಿನ ಎಸ್.ಹೆಚ್. ರಸ್ತೆಯಲ್ಲಿರುವ ಜೆರಾಕ್ಸ್ ಅಂಗಡಿ ಒಂದಕ್ಕೆ ಸದ್ರಿ ಸ್ವತ್ತಿನ ಮಾಲೀಕರಾದ ಶ್ರೀ ಅಬ್ದುಲ್ ಖುದ್ದೂಸ್ ಬಿನ್ ಲೇಟ್ ಅಬ್ದುಲ್ ವಹಾಬ್ ಸಾಬ್ ಆದ ನಾನು ತೆಗೆದುಕೊಂಡು ಹೋಗಿ ಬರುವಾಗ ರಸ್ತೆಯಲ್ಲಿ ಸದ್ರಿ ದಸ್ತಾವೇಜು ಇದ್ದಂತಹ ಲಕೋಟೆಯನ್ನು ಕಳೆದುಕೊಂಡಿರುತ್ತೇನೆ. ಈ ಬಗ್ಗೆ ದಿನಾಂಕ 8.8.2022ರಂದು ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ Lost Report No.0288135/2022 ರ ಪ್ರಕಾರ ದೂರು ದಾಖಲು ಮಾಡಿರುತ್ತೇನೆ.
ನಾವುಗಳು ಇಬ್ಬರೂ ಸಂಬಂಧಿಕರಾಗಿದ್ದು, ಮೇಲ್ಕಂಡ ವಿಳಾಸದಲ್ಲಿ ಒಟ್ಟಿಗೆ ದಸ್ತಾವೇಜುಗಳನ್ನು ಕಳೆದುಕೊಂಡಿರುವುದರಿಂದ ಇಬ್ಬರೂ ಸೇರಿ ಜಂಟಿಯಾಗಿ ಈ ಸಾರ್ವಜನಿಕ ಪ್ರಕಟಣೆಯನ್ನು ಕೊಟ್ಟಿರುತ್ತೇವೆ. ದಾಖಲೆ ಸಿಕ್ಕಿರುವವರು ತಂದು ಕೊಟ್ಟಲ್ಲಿ ಅಂತಹವರ ಮೇಲೆ ಯಾವುದೇ ಕಾನೂನು ಕ್ರಮವನ್ನು ತೆಗೆದುಕೊಳ್ಳದೇ, ತಮಗಾಗುವ ವೆಚ್ಚವನ್ನು ಸಹಾ ನೀಡಲಿ ಸಿದ್ಧರಿದ್ದೇವೆ.
ಹೆಚ್.ಸೈಯದ್ ಖಲೀಲ್ ಬಿನ್ ಲೇಟ್ ಸೈಯದ್ ಖಾದರ್, ಎಸ್.ಕೆ. ರೈಸ್ ಮಿಲ್, ಜಿಗಳಿ ರಸ್ತೆ, ಮಲೇಬೆನ್ನೂರು, ಹರಿಹರ ತಾಲ್ಲೂಕು. ಮೊಬೈಲ್ ನಂ. 99864 04075
ಅಬ್ದುಲ್ ಖುದ್ದೂಸ್ ಬಿನ್ ಲೇಟ್ ಅಬ್ದುಲ್ ವಹಾಬ್ ಸಾಬ್, ಎಸ್.ಕೆ. ರೈಸ್ ಮಿಲ್, ಜಿಗಳಿ ರಸ್ತೆ, ಮಲೇಬೆನ್ನೂರು , ಹರಿಹರ ತಾಲ್ಲೂಕು. ಮೊಬೈಲ್ ನಂ. 99163 77070

**ಬೇಕಾಗಿದ್ದಾರೆ**
ಅಪೆ ಆಟೋ ಡೀಸೆಲ್, LPG, CNG ಪ್ಯಾಸೆಂಜರ್, ಗೂಡ್ಸ್ ಅಪೆ ಆಟೋ ಎಲ್‌ಪಿಜಿ ತ್ರಿಚಕ್ರ ವಾಹನಗಳ ಮಾರಾಟ ಮಾಡಲು ತಾಲ್ಲೂಕುವಾರು
ಸೇಲ್ಸ್ ಎಕ್ಸಿಕ್ಯೂಟಿವ್ಸ್-4
(ಅಭ್ಯರ್ಥಿಗಳು ಸ್ವಂತ ಬೈಕ್ ಹೊಂದಿರಬೇಕು.)
ವಿದ್ಯಾರ್ಹತೆ: SSLC to Degree.
ಆಕರ್ಷಕ ಸಂಬಳ + Incentive+TA, DA.
**ಬೇಕಾಗಿದ್ದಾರೆ**
ವರ್ಕ್‌ಷಾಪ್ ಸೂಪರ್‌ವೈಸರ್-2
(5 ವರ್ಷ ಅನುಭವ/ಫ್ರೆಶರ್‌ಗೂ ಸಹ ಆದ್ಯತೆ)
ಡೀಜಲ್ ಮೆಕ್ಯಾನಿಕ್-4
ಹೆಲ್ಪರ್ಸ್-4
ಅಭ್ಯರ್ಥಿಗಳು ದಾಖಲಾತಿಯೊಂದಿಗೆ ನೇರವಾಗಿ ಸಂಪರ್ಕಿಸಿ:
ಸಮಯ: ಮ. 3 ರಿಂದ 5
ಫೋನ್ /ಮೊಬೈಲ್ ವಿಚಾರಣೆ ಇರುವುದಿಲ್ಲ
ಗಣೇಶ ಮೋಟಾರ್
ಎಲ್.ಐ.ಸಿ. ಆಫೀಸ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ-6.

**For Sale**
2BHK Flat for Sale, MCC `B' Block, davanagere.
Contact :
96863 96992, 99001 18054

**ಸೈಟ್ ಮಾರಾಟಕ್ಕಿದೆ**
ಜೆ.ಹೆಚ್ ಪಟೇಲ್ ಬಡಾವಣೆಯ 'ಎ' ಬ್ಲಾಕ್, 60 ಅಡಿ ರಸ್ತೆಯಲ್ಲಿ 30x50 ಪೂರ್ವ ದಿಕ್ಕಿನ ಸೈಟ್ ಮಾರಾಟಕ್ಕೆ ಇದೆ.
ಕುಂಟೋಜಿ ಬಸವರಾಜ್
M : 80503 98121

**WANTED ACCOUNTANT**
Male/Female, Salary 10k
Experienced preferred.
Contact with bio data
KANTI HANDLOOM
Kaipet, Davangere.
94487 54226

**NA ಲ್ಯಾಂಡ್ ನೆಲ ಬಾಡಿಗೆಗೆ**
ದಾವಣಗೆರೆ ತಾಲ್ಲೂಕಿನ ಹೆಬ್ಬಾಳು ಗ್ರಾಮದ ಟೋಲ್ ಬಳಿ 1 ಎಕರೆ 32 ಗುಂಟೆ ರಾಷ್ಟ್ರೀಯ ಹೆದ್ದಾರಿಗೆ ಲಗತ್ತಾಗಿದ್ದು ನೆಲ ಬಾಡಿಗೆಗೆ ಇದೆ.
97410 59755, 78929 75077

**ಬೇಕಾಗಿದ್ದಾರೆ**
ವೃತ್ತಿಪರ ವ್ಯಕ್ತಿಯನ್ನು ನಮ್ಮ ತಂಡಕ್ಕೆ ಸೇರಿಸಿಕೊಳ್ಳಲು ಬಯಸುತ್ತೇವೆ. ಒಂದು ಅಥವಾ ಎರಡು ವರ್ಷಗಳ ಅನುಭವದ ಆದ್ಯತೆಯ ಮೇರೆಗೆ ರಿಜಿಸ್ಟರ್ಡ್ ಫಾರ್ಮಸಿಸ್ಟ್ ಅಗತ್ಯವಿದೆ.
ಸ್ಥಳ : ದಾವಣಗೆರೆ ಸಿಟಿ
96320 56056, 99869 06863

**WANTED**
Banking sector tele caller (Female Only)
Qualification - Any Degree
No. 2257/5 2nd Floor, MCC `A' Block
Beside Togataveera Kalyana Mantapa
96869 56142
Interview time :11 AM

**ಬೇಕಾಗಿದ್ದಾರೆ**
ಸೋನಾಲಿಕ ಟ್ರ್ಯಾಕ್ಟರ್ ಶೋ ರೂಂ
ಎಸ್‌ಎಸ್ ಇಂಡಿಯಾ ಟ್ರ್ಯಾಕ್ಟರ್ಸ್
ಚನ್ನಗಿರಿ, ಮಲೇಬೆನ್ನೂರು, ಹೊನ್ನಾಳಿ ಇಲ್ಲಿ ಸೇಲ್ಸ್ ಮ್ಯಾನೇಜರ್, ಸೇಲ್ಸ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ಬೇಕಾಗಿದ್ದಾರೆ.
ಫೋ. : 78996 77771

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. P U C or any DEGREE,
ವಿಳಾಸ : ಕಾವೇರಿ ಫಾರ್ಮಾ
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ. 577002

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ADMISSION OPEN 2022**
MBBS
India & Abroad - NEET Required
MCC Screening test must be practice in India
Pharma. D
BSc. Nursing
P.B. BSc (N) D. Pharma
BPT, B.Pharm
B.Sc., MLT, Cardiac, Perfusion, Agri, Radiology
* Conditions Apply

**MBBS**
Aspirants Looking For MBBS Admission in Russia With Minimum Criteria and Low Budget, Call or Visit
+91 7022 321 123
Doctors Query Pvt Ltd.,
www.doctorsquery.com

**AVOID MOSQUITOES**
Mosquito Net for Doors and windowsh, MDF Design Boards available.
SRI GOWRI ENTERPRISES
# 7C2, 4th Cross, Karur Industrial Area, Near D.C Office, P.B Road, Davangere.
72049 94628

**WANTED**
Require candidate for data Entry Work with Basic Knowledge of Tally and Excel. (Male or female).
Also Wanted Worker for Sales.
In hardware Shop (Male) Age: 18 to 35
POOJA HARDWARES
Address : Opp.Aruna theatre, P B Road, DAVANGERE

**ಸುಕ್ಷೇತ್ರ ಗಾಣಗಟ್ಟೆ ಶ್ರೀ ಮಾಯಮ್ಮ ದೇವಿ ಜ್ಯೋತಿಷ್ಯಾಲಯ**
ಪಂಡಿತ್ ಶ್ರೇಯಸ್ ಭಟ್- 81232 83279
ಇವರು ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಹೇಳುತ್ತಾರೆ. ವಿದ್ಯೆ, ಉದ್ಯೋಗ, ಲೈಂಗಿಕ ಸಮಸ್ಯೆ, ಮಾಟ, ಮಂತ್ರ, ಸಂತಾನ, ವಶೀಕರಣ, ಆರೋಗ್ಯ ಇನ್ನೂ ಮುಂತಾದ ನಿಮ್ಮಯಾವುದೇ ಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ.
ವಿಳಾಸ : ಅಯ್ಯಪ್ಪ ಸ್ವಾಮಿ ದೇವಸ್ಥಾನ ಹಿಂಭಾಗ, ಬಿ.ಐ.ಇ.ಟಿ. ಕಾಲೇಜ್ ರಸ್ತೆ, ಎಂ.ಸಿ.ಸಿ ಬ್ಲಾಕ್, ದಾವಣಗೆರೆ.

# 'ಯಕ್ಷಗಾನ' ವಿಶ್ವ ಮಾನ್ಯತೆ ಪಡೆದ ದೈವೀ ಕಲೆ



ದಾವಣಗೆರೆ, ಆ. 8- ಯಕ್ಷಗಾನ ಕಲೆಯು ಕೇವಲ ಮನೋರಂಜನಾ ಕಲೆಯಾಗಿರದೇ ಜನರ ಆರಾಧನೆಯ ದೈವೀ ಕಲೆಯಾಗಿದೆ. ಇಂದು ಸಿನೆಮಾ, ಧಾರಾವಾಹಿಗಳ ವೈಭವೀಕರಣದ ಮಧ್ಯೆಯೂ ಯಕ್ಷಗಾನ ಕಲೆಯು ತನ್ನ ಅಸ್ತಿತ್ವವನ್ನು ಸಮರ್ಥವಾಗಿ ಉಳಿಸಿಕೊಂಡಿದೆ ಎಂದರೆ, ಅದು ತನ್ನ ಗುಣಮಟ್ಟದ ಮೌಲ್ಯವನ್ನು ಉಳಿಸಿಕೊಂಡಿರುವುದೇ ಕಾರಣವಾಗಿದೆ ಎಂದು ಭಾರತೀಯ ರೆಡ್ ಕ್ರಾಸ್ ಸೊಸೈಟಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ ಲೆಕ್ಕ ಪರಿಶೋಧಕ ಉಮೇಶ್ ಶೆಟ್ಟಿ ಹೇಳಿದರು.

ನಗರದ ಪದ್ಮಶ್ರೀ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ನಿನ್ನೆ ಆಯೋಜಿಸಲಾಗಿದ್ದ ಯಕ್ಷಸೌರಭ ಯಕ್ಷಗಾನ ಸಂಸ್ಥೆಯ ನಾಲ್ಕನೇ ವಾರ್ಷಿಕೋತ್ಸವ ಮತ್ತು 'ಭಸ್ಮಾಸುರ ಮೋಹಿನಿ' ಯಕ್ಷಗಾನ ಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯಕ್ಷಗಾನದಲ್ಲಿ ಪ್ರದರ್ಶನಗೊಳ್ಳುವ ಮಹಾಭಾರತ, ರಾಮಾಯಣ ಆಧಾರಿತ ಪೌರಾಣಿಕ ಕಥೆಗಳು ಜನರಲ್ಲಿ, ಅದರಲ್ಲೂ ಬಹುಮುಖ್ಯವಾಗಿ ವಿದ್ಯಾರ್ಥಿಗಳು ಮತ್ತು

## ಹಿರಿಯ ಲೆಕ್ಕ ಪರಿಶೋಧಕ ಉಮೇಶ್ ಶೆಟ್ಟಿ ಶ್ಲಾಘನೆ

ಯುವಜನರಲ್ಲಿ ಸಂಸ್ಕಾರ ಮತ್ತು ಜ್ಞಾನ ಸಂಪತ್ತು ಬೆಳೆಸಲು ಸಹಕಾರಿಯಾಗುತ್ತವೆ. ಕರಾವಳಿ ಭಾಗದಲ್ಲಿ ಉದಯವಾದ ಈ ಕಲೆಯು ಇಂದು ವಿಶ್ವ ಮಾನ್ಯತೆಯನ್ನು ಹೊಂದಿದೆ ಎಂದರೆ ಯಕ್ಷಗಾನದ ಕಲಾ ಶ್ರೀಮಂತಿಕೆ ಅರ್ಥವಾಗುತ್ತದೆ ಎಂದು ಹೇಳಿದರು.

ಯಕ್ಷ ಸೌರಭದ ಅಧ್ಯಕ್ಷ ಸಕ್ಕಟ್ಟು ರಾಜಶೇಖರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ, ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ರಾಯ್ಕರ್, ಬಿಜೆಪಿ ಮುಖಂಡ ಶ್ರೀನಿವಾಸ್ ದಾಸಕರಿಯಪ್ಪ, ಹೋಟೆಲ್ ಉದ್ಯಮಿ ಮಂಜುನಾಥದಾಸ್ ಮಾತನಾಡಿದರು.

ಯಕ್ಷ ಸೌರಭದ ಸಂಸ್ಥಾಪಕ ಹಾಗೂ ಯಕ್ಷ ಗುರು ಕರ್ಜೆ ಸೀತಾರಾಮ ಆಚಾರ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಯಕ್ಷ ಸೌರಭದ ಪ್ರಧಾನ ಕಾರ್ಯದರ್ಶಿ ಕೆ. ರಾಘವೇಂದ್ರ ನಾಯರಿ ಕಾರ್ಯಕ್ರಮ ನಿರೂಪಿಸಿದರು, ರಾಘವೇಂದ್ರ ಪಿ. ಶೇಟ್ ಸ್ವಾಗತಿಸಿದರು. ರಾಗಿಣಿ ಮಾಲತೇಶ್ ವಂದಿಸಿದರು.

ಯಕ್ಷಗಾನ ಪ್ರದರ್ಶನದ ಹಿಮ್ಮೇಳದಲ್ಲಿ ಭಾಗವತರಾಗಿ ಬಿ.ಸುಬ್ರಾಯ ಹೆಬ್ಬಾರ್, ಮದ್ದಳೆ ವಾದಕರಾಗಿ ಸಂಪತ್ ಆಚಾರ್ಯ ಉಡುಪಿ, ಚಂಡೆ ವಾದಕರಾಗಿ ಕಾರ್ತಿಕ್ ಧಾರೇಶ್ವರ ಹಾಗೂ ಮುಮ್ಮೇಳದಲ್ಲಿ ಭಸ್ಮಾಸುರನ ಪಾತ್ರದಲ್ಲಿ ಅಮೂಲ್ಯ ಸಿ., ಮೋಹಿನಿಯಾಗಿ ಅನಘ ಉಪಾಧ್ಯ, ಈಶ್ವರನಾಗಿ ಹರ್ಷಿತಾ ಪ್ರಸಾದ, ದೇವೇಂದ್ರನಾಗಿ ಅನಿರುದ್ಧ ಉಪಾಧ್ಯ, ಪಾರ್ವತಿಯಾಗಿ ಧನ್ಯಶ್ರೀ, ಬ್ರಹ್ಮನಾಗಿ ಸಹನಾ ಸೇರಿಗಾರ, ವಿಷ್ಣುವಾಗಿ ಮಾನ್ಯಶ್ರೀ, ಬ್ರಾಹ್ಮಣನಾಗಿ ಶ್ರೀನಿವಾಸ ಉಪಾಧ್ಯ, ಅಗ್ನಿಯಾಗಿ ಭಾರ್ಗವ ಆರ್., ಕುಬೇರನಾಗಿ ಶ್ರೀಲಕ್ಷ್ಮಿ, ವರುಣನಾಗಿ ಸಿಂಧೂ, ಯಮಧರ್ಮನಾಗಿ ರೋಹಿತ್, ವಾಯುವಾಗಿ ಗಂಗಾ, ವೀರಭದ್ರನಾಗಿ ಸೃಜನ್ ಎಸ್.ಆಚಾರ್ಯ ಅಭಿನಯಿಸಿ ಪ್ರೇಕ್ಷಕರ ಮನ ಗೆದ್ದರು.

ಕಾರ್ಯಕ್ರಮದಲ್ಲಿ ಮಾಲತೇಶ್ ರಾವ್, ಉದಯ ಸೇರಿಗಾರ್, ರಾಜೇಶ್ ಆಚಾರ್ಯ, ವಾದಿರಾಜ್ ಉಪಾಧ್ಯ, ವಾಣಿ ಶ್ರೀನಿವಾಸ್, ವಿದ್ಯಾಲತಾ, ಉಷಾ ರಾಘವೇಂದ್ರ, ಲತಾ, ವಾಣಿ, ಅನಂತ ಹೆಗಡೆ, ಹಟ್ಟಿಯಂಗಡಿ ಆನಂದ ಶೆಟ್ಟಿ, ಬಾಳೆಹೊಳೆ ಪ್ರದೀಪ್ ಕಾರಂತ, ನೀಲಾವರ ಭಾಸ್ಕರ ನಾಯಕ್, ಹೇಮಾ ಶಾಂತಪ್ಪ ಪೂಜಾರಿ, ಕಾಡೂರು ಮೋಹನದಾಸ್ ಶೆಟ್ಟಿ, ರತ್ನಾಕರ ಶೇಟ್, ಕೆ.ಶಶಿಶೇಖರ್ ಮುಂತಾದವರು ಉಪಸ್ಥಿತರಿದ್ದರು.

# ವಿದ್ಯುತ್ ಮಸೂದೆ ಕೈ ಬಿಡುವಂತೆ ಆಗ್ರಹ




ದಾವಣಗೆರೆ, ಆ. 8- ಜನ ವಿರೋಧಿ, ರೈತ ವಿರೋಧಿ ಹಾಗೂ ಕಾರ್ಮಿಕ ವಿರೋಧಿ, ವಿದ್ಯುತ್ (ತಿದ್ದುಪಡಿ) ಮಸೂದೆ 2022 ನ್ನು ಲೋಕಸಭೆಯಲ್ಲಿ ಏಕಪಕ್ಷೀಯವಾಗಿ ಮಂಡನೆ ಮಾಡುತ್ತಿರುವುದನ್ನು ಕೈ ಬಿಡುವಂತೆ ಆಗ್ರಹಿಸಿ ಆಲ್ ಇಂಡಿಯಾ ಪವರ್‌ಮೆನ್ಸ್ ಫೆಡರೇಷನ್ (ಎಐಪಿಎಫ್) ಜಿಲ್ಲಾ ಸಮಿತಿಯಿಂದ ಇಂದು ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಗಾಂಧಿ ವೃತ್ತದಲ್ಲಿ ಜಮಾಯಿಸಿದ್ದ ಸಮಿತಿ ಪದಾಧಿಕಾರಿಗಳು, ಕೇಂದ್ರ ಸರ್ಕಾರವು ನೌಕರರ, ರೈತರ ತೀವ್ರ ವಿರೋಧವನ್ನು ಕಡೆಗಣಿಸಿ ಜನ ವಿರೋಧಿ, ಕಾರ್ಮಿಕ ವಿರೋಧಿಯಾದ ವಿದ್ಯುತ್ (ತಿದ್ದುಪಡಿ) ಮಸೂದೆ 2022 ಅನ್ನು ಲೋಕಸಭೆಯಲ್ಲಿ ಏಕಪಕ್ಷೀಯವಾಗಿ ಮಂಡನೆ ಮಾಡಲು ಮುಂದಾಗಿರುವುದು ಅತ್ಯಂತ ಜನತಂತ್ರ ವಿರೋಧಿ ಹೆಜ್ಜೆಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನಂತರ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ, ವಿದ್ಯುತ್ (ತಿದ್ದುಪಡಿ) ಮಸೂದೆ 2022 ಅನ್ನು ಹಿಂಪಡೆಯುವಂತೆ ಒತ್ತಾಯಿಸಿ ಉಪವಿಭಾಗಾಧಿಕಾರಿ ಮುಖಾಂತರ ಪ್ರಧಾನ ಮಂತ್ರಿ ಅವರಿಗೆ ಮನವಿ ಸಲ್ಲಿಸಿದರು.

**ಇದುವರೆಗೂ ಸರ್ಕಾರಿ ಸ್ವಾಮ್ಯದಲ್ಲಿ, ಸಾರ್ವಜನಿಕ ವಲಯದಲ್ಲಿ ಇತರೆ ನೌಕರರ ಹಾಗೂ ಕಾರ್ಮಿಕರ ಪರವಾದ ಸೌಲಭ್ಯಗಳನ್ನು ಒಂದೊಂದಾಗಿ ಕಣ್ಮರೆ ಮಾಡಿ, ಕಾರ್ಮಿಕರ ಹಕ್ಕುಗಳನ್ನು ಕಿತ್ತುಕೊಳ್ಳುವಂತಹ ಪರಿಸ್ಥಿತಿಯು ನಿರ್ಮಾಣವಾಗುತ್ತಿದೆ. ನೌಕರರ ಹಾಗೂ ಕಾರ್ಮಿಕರ ಖಾಯಮಾತಿ ಮತ್ತಿತರೆ ಉದ್ಯೋಗ ಭದ್ರತೆಗೆ ಅಪಾಯ ಎದುರಾಗುತ್ತದೆ.**

## ನಗರದಲ್ಲಿ ಎಐಪಿಎಫ್ ಪ್ರತಿಭಟನೆ

ಈ ಮಸೂದೆಯನ್ನು ಏಕಾಏಕಿಯಾಗಿ ಮಂಡಿಸಲು ಮುಂದಾಗಿರುವುದು ವಿದ್ಯುತ್ ಕ್ಷೇತ್ರವನ್ನು ಖಾಸಗಿ ಕಾರ್ಪೊರೇಟ್ ಕಂಪನಿಗಳಿಗೆ ಮುಕ್ತವಾಗಿ ತೆರೆದಿಡಲು ಮುಂದಾಗುತ್ತಿದೆ. ಇದುವರೆಗೂ ಸಾರ್ವಜನಿಕ ವಲಯದ ಅಂದರೆ ಸರ್ಕಾರದ ಸ್ವಾಮ್ಯದಲ್ಲಿದ್ದಂತಹ ವಿದ್ಯುತ್ ಸರಬರಾಜು ಕಾರ್ಯಗಳನ್ನು ಒಂದೇ ಏಟಿಗೆ ಖಾಸಗಿ ಕುಳಗಳಿಗೆ ಒಪ್ಪಿಸುವ ಹೀನ ದುರುದ್ದೇಶವನ್ನು ಹೊಂದಿದೆ. ಈ ಮಸೂದೆಯನ್ನು ರಾಜ್ಯದಲ್ಲಿ ಜಾರಿಗೊಳಿಸಿದಲ್ಲಿ ರಾಜ್ಯದ ಕೆಪಿಸಿಎಲ್, ಕೆಪಿಟಿಸಿಎಲ್, ಬೆಸ್ಕಾಂ, ಮೆಸ್ಕಾಂ, ಹೆಸ್ಕಾಂ ಹಾಗೂ ಜೆಸ್ಕಾಂ ಇತ್ಯಾದಿ ವಿದ್ಯುತ್ ಉತ್ಪಾದನೆ-ಸರಬರಾಜು ಹಾಗೂ ವಿತರಣೆಯ ಕಂಪನಿಗಳು ಖಾಸಗಿ ಕಾರ್ಪೊರೇಟ್ ಕಂಪನಿಗಳ ಕೈ ವಶವಾಗಲಿವೆ ಎಂದು ಆಕ್ಷೇಪಿಸಿದರು.

ವಿದ್ಯುತ್ ವಲಯದ ಎಲ್ಲಾ ಹಂತಗಳ ಖಾಸಗೀಕರಣ ಕೈಬಿಡಬೇಕು. ಎಲ್ಲಾ ಗುತ್ತಿಗೆ ನೌಕರರ ಸೇವೆ ಖಾಯಂಗೊಳಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಎಐಪಿಎಫ್ ಜಿಲ್ಲಾ ಸಂಚಾಲಕ ಮಂಜುನಾಥ ಕೈದಾಳೆ, ಜಿಲ್ಲಾ ಉಪಾಧ್ಯಕ್ಷ ಶಿವಾಜಿರಾವ್, ಜಿಲ್ಲಾ ಮುಖಂಡ ತಿಪ್ಪೇಸ್ವಾಮಿ ಅಣಬೇರು, ಮಧು ತೊಗಲೇರಿ, ನಾಗಸ್ಮಿತಾ, ಡಾ. ಸುನೀತ್ ಕುಮಾರ್, ಲೋಕೇಶ್, ಬೀರಲಿಂಗಪ್ಪ, ಹನುಮಂತಪ್ಪ, ವಿರುಪಾಕ್ಷಪ್ಪ, ತುಕಾರಾಮ್, ಮಂಜಪ್ಪ, ಪಾಪಣ್ಣ ಸೇರಿದಂತೆ, ಇತರರು ಪಾಲ್ಗೊಂಡಿದ್ದರು.

# ಹೊನ್ನಾಳಿ-ನ್ಯಾಮತಿ ಅವಳಿ ತಾ. ಗೆ ಮಳೆ ಶಾಪ : ರೇಣುಕಾಚಾರ್ಯ

ನ್ಯಾಮತಿ, ಆ. 9 - ಅವಳಿ ತಾಲ್ಲೂಕಿನಾದ್ಯಂತ ಸುರಿದ ಭಾರೀ ಮಳೆ ರೈತರ ಪಾಲಿಗೆ ಶಾಪವಾಗಿ ಪರಿಣಮಿಸಿದ್ದು, ಹೊನ್ನಾಳಿ, ನ್ಯಾಮತಿ ಅವಳಿ ತಾಲ್ಲೂಕಿನಾದ್ಯಂತ 11 ಸಾವಿರ ಹೆಕ್ಟೇರ್‌ಗೂ ಅಧಿಕ ಕೃಷಿ ಹಾಗೂ ತೋಟಗಾರಿಕಾ ಬೆಳೆಗಳು ಹಾನಿಯಾಗಿವೆ ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಹಾನಿಯ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು ಅವರು ಮಾತನಾಡಿದರು. ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಹೆಕ್ಟೇರ್‌ನಷ್ಟು ಕೃಷಿ ಬೆಳೆಗಳು, 650 ಹೆಕ್ಟೇರ್‌ಗೂ ಅಧಿಕ ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿದ್ದು, ಇನ್ನೂ ಅಧಿಕಾರಿಗಳು ಬೆಳೆ ಹಾನಿ ಪೀಡಿತ ಪ್ರದೇಶಗಳಲ್ಲಿ ಬೆಳೆ ಹಾನಿಯ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆಂದರು.

ಅವಳಿ ತಾಲ್ಲೂಕಿನಲ್ಲಿ 278 ಮನೆಗಳಿಗೆ ಹಾನಿಯಾಗಿದ್ದು, ಅವುಗಳಿಗೆ ಎ, ಬಿ, ಸಿ ಕೆಟಗರಿ ಆಧಾರದ ಮೇಲೆ ಪರಿಹಾರ ನೀಡಲಾಗುವುದು ಎಂದು ಶಾಸಕರು, ಅವಳಿ ತಾಲ್ಲೂಕಿನಲ್ಲಿ 296 ಮನೆಗಳಿಗೆ ನೀರು ನುಗ್ಗಿದ್ದು ಅವರಿಗೆ ತಲಾ ಹತ್ತು ಸಾವಿರ ಪರಿಹಾರ ನೀಡಲಾಗುವುದು ಎಂದರು.

**ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ಭೇಟಿ:** ನ್ಯಾಮತಿ, ಸುರಹೊನ್ನೆ, ಕುದುರೆಕೊಂಡ, ಯರಗನಾಳ್ ಸೇರಿದಂತೆ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಅಲ್ಪಾವಧಿ ತೋಟಗಾರಿಕೆ ಬೆಳೆಗಳಾದ ಟೊಮ್ಯಾಟೋ, ಮೆಣಸಿನಕಾಯಿ, ಬೀನ್ಸ್, ಕೋಸು ಸೇರಿದಂತೆ ವಿವಿಧ ಬೆಳೆಗಳನ್ನು ವೀಕ್ಷಣೆ ಮಾಡಿದ ಶಾಸಕರು, ಅಧಿಕಾರಿಗಳಿಂದ ಹಾನಿಯ ಬಗ್ಗೆ ಸಮಗ್ರ ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ತೋಟಗಾರಿಕೆ ಇಲಾಖೆ ಅಧಿಕಾರಿ ವೀರಭದ್ರಪ್ಪ, ಆರ್‌ಐ, ವಿ ಎ ಸೇರಿದಂತೆ ಗ್ರಾಮಸ್ಥರು, ರೈತರು ಮತ್ತಿತರರಿದ್ದರು.

# ನಗರದಲ್ಲಿ ಇಂದಿನಿಂದ ಭಾರತ ಸೇವಾದಳದ ಅಮೃತ ಮಹೋತ್ಸವ

ಭಾರತದ ಸ್ವಾತಂತ್ರ್ಯಕ್ಕೆ 75 ವರ್ಷಗಳು ತುಂಬಿದ ಪ್ರಯುಕ್ತ ಭಾರತ ಸೇವಾದಳದಿಂದ ಇಂದು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ 8 ಗಂಟೆಗೆ 'ಕ್ವಿಟ್ ಇಂಡಿಯಾ ಚಳುವಳಿ' ಮತ್ತು ಅಮೃತ ಮಹೋತ್ಸವ ಮನೆ ಮನೆಯಲ್ಲೂ ತ್ರಿವರ್ಣ ಧ್ವಜ, ಪ್ರಭಾತ್ ಪೇರಿ ಅಭಿಯಾನ. ಹೊನ್ನಾಳಿ ಹಿರೇಕಲ್ಮಠದಿಂದ ಸಂಗೊಳ್ಳಿ ರಾಯಣ್ಣ ವೃತ್ತದವರೆಗೆ.

ನಾಳೆ ಬುಧವಾರ ಮಧ್ಯಾಹ್ನ 3 ಗಂಟೆಗೆ ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಗೆ ಹೊನ್ನಾಳಿ ಹಿರೇಕಲ್ಮಠದಲ್ಲಿ ರಾಷ್ಟ್ರಧ್ವಜ ಮಾಹಿತಿ ಶಿಬಿರ.

ನಾಡಿದ್ದು ಗುರುವಾರ ಬೆಳಿಗ್ಗೆ 10 ಗಂಟೆಗೆ ನಿಟುವಳ್ಳಿ ಪ್ರೌಢಶಾಲೆಯಲ್ಲಿ ಸೇವಾದಳ ಮಕ್ಕಳಿಂದ ಅಮೃತ ಮಹೋತ್ಸವ ಮತ್ತು ಮನೆ ಮನೆಯಲ್ಲಿ ರಾಷ್ಟ್ರಧ್ವಜ ಕುರಿತು ಪ್ರಭಾತ್ ಪೇರಿ. ಅಂದು ಮಧ್ಯಾಹ್ನ 3 ಗಂಟೆಗೆ ಅತ್ತಿಗೆರೆ ಎಸ್.ಸಿ.ಎಸ್.ಜಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ 75 ಸಸಿಗಳನ್ನು ನೆಡುವ ಸಸ್ಯೋತ್ಸವ ಕಾರ್ಯಕ್ರಮ.

# ಶಿಕ್ಷಣ ಇಲಾಖೆ ಅಧಿಕಾರಿಗಳ ಲೋಪದಿಂದ ಸೌಲಭ್ಯ ವಂಚಿತ: ಆರೋಪ

ದಾವಣಗೆರೆ, ಆ. 8- ಶಿಕ್ಷಣ ಇಲಾಖೆ ಅಧಿಕಾರಿಗಳ ಲೋಪದಿಂದಾಗಿ ನನಗೆ ಸಿಗಬೇಕಾದ ಸೌಲಭ್ಯಗಳು ಸಿಗುತ್ತಿಲ್ಲ ಎಂದು ಶಿಕ್ಷಕಿ ಕೆ.ಡಿ. ಪದ್ಮಾವತಿ ಆರೋಪಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನ ಐಗೂರು ಗ್ರಾಮದ ಖಾಸಗಿ ವಿದ್ಯಾಸಂಸ್ಥೆಯ ಪ್ರೌಢಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡಿದ್ದು, ಆಗ ಶಾಲೆಯು ಅನುದಾನ ರಹಿತವಾಗಿತ್ತು. ನಂತರ ಅನುದಾನಕ್ಕೆ ಒಳಪಟ್ಟ ಮೇಲೆ ನನ್ನನ್ನು ಸೇವೆಯಿಂದ ಕೈ ಬಿಡುವ ದೃಷ್ಟಿಯಿಂದ ನನ್ನ ದಾಖಲೆಗಳನ್ನು ಪರಿಶೀಲಿಸದೆ ತರಾತುರಿಯಲ್ಲಿ ಶಿಕ್ಷಣ ಇಲಾಖೆ ಅಧಿಕಾರಿಗಳು ಲೋಪವೆಸಗಿದ್ದಾರೆ. ಇದರಿಂದ ಸರ್ಕಾರದ ಸೌಲಭ್ಯಗಳಿಂದ ವಂಚಿತಳಾಗಿದ್ದೇನೆ. ನನಗೆ ಅನುದಾನಿತ ವೇತನ ಹಾಗೂ ವಿಶ್ರಾಂತಿ ವೇತನ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕೆಂದು ಅವರು ಸರ್ಕಾರಕ್ಕೆ ಒತ್ತಾಯಿಸಿದರು.

# ಬಿ.ಎಸ್.ಚನ್ನಬಸಪ್ಪ ಅಂಡ್ ಸನ್ಸ್‌ನ ಬಿ.ಯು.ಚಂದ್ರಶೇಖರ್ ಅವರಿಗೆ ಪ್ರಶಸ್ತಿ



ದಾವಣಗೆರೆ, ಆ.8- ವಿಜಯವಾಣಿ - ದಿಗ್ವಿಜಯ ಜಂಟಿಯಾಗಿ ಅತ್ಯುತ್ತಮ ಉದ್ಯಮಿಗಳಿಗೆ ನೀಡುವ ವಿಜಯ ರತ್ನ ಪ್ರಶಸ್ತಿಗೆ ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಮಾಲೀಕರಲ್ಲೊಬ್ಬರಾದ ಬಿ.ಯು. ಚಂದ್ರಶೇಖರ್ ಭಾಜನರಾಗಿದ್ದಾರೆ. ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ. ಸುಧಾಕರ್ ಅವರು ಬಿ.ಯು. ಚಂದ್ರಶೇಖರ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ವಿಜಯವಾಣಿ ಸಂಪಾದಕ ಆನಂದ್ ಸಂಕೇಶ್ವರ, ಬಿ.ಎಸ್. ಮೃನಾಲ್, ಬಿ.ಸಿ.ವೇದ್ ಮತ್ತು ಇತರರು ಉಪಸ್ಥಿತರಿದ್ದರು.

## ಕೊಂಡಜ್ಜಿ ಗ್ರಾ.ಪಂ.ಗೆ ಹನುಮಂತಪ್ಪ ಅಧ್ಯಕ್ಷ

ಹರಿಹರ, ಆ. 8 - ಕೊಂಡಜ್ಜಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಕೆಂಚನಹಳ್ಳಿಯ ಕೆ.ಜಿ. ಹನುಮಂತಪ್ಪ, ಉಪಾಧ್ಯಕ್ಷರಾಗಿ ಕುರುಬರಹಳ್ಳಿಯ ಭಾಗ್ಯಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪಂಚಾಯತ್ ರಾಜ್ ಇಲಾಖೆ ಎಇಇ ಗಿರೀಶ್ ಚುನಾವಣಾಧಿಕಾರಿಯಾಗಿದ್ದರು. ಪಿಡಿಒ ರಾಮಚಂದ್ರ, ಕಾರ್ಯದರ್ಶಿ ನಟರಾಜ್, ಲೆಕ್ಕಾಧಿಕಾರಿ ನೇತ್ರಾವತಿ, ಮಾಜಿ ಮಂಡಲ ಪ್ರಧಾನ ಭರಮಪ್ಪ, ಮಾಜಿ ಅಧ್ಯಕ್ಷ ಗಂಗಾಧರ್, ತಿಪ್ಪಣ್ಣ, ಮಹಾಂತೇಶ್ ಜೆ.ಎಚ್. ಮತ್ತಿತರರು ಭಾಗವಹಿಸಿದ್ದರು.

# ಸವಿತಾ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಆಗ್ರಹ

ದಾವಣಗೆರೆ, ಆ.8- ನಗರದ ಸವಿತಾ ಕ್ಷೇಮಾಭಿವೃದ್ಧಿ ಸಂಘದಿಂದ ಸವಿತಾ ಸಮಾಜದ ಎಸ್ಸೆಸ್ಸೆಲ್ಸಿ, ಪಿಯುಸಿ ವಿದ್ಯಾರ್ಥಿಗಳಿಗೆ 9ನೇ ವರ್ಷದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಾಳೆ ದಿನಾಂಕ 9ರಂದು ಬೆಳಗ್ಗೆ 10.30ಕ್ಕೆ ನಗರದ ರೋಟರಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಸಂಘದ ಉಪಾಧ್ಯಕ್ಷ ಪಿ.ಬಿ.ವೆಂಕಟಾಚಲಪತಿ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಪಿ.ಜಿ.ನಾಗರಾಜ್ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಭೀಮಸೇನ, ಆಕಾಶವಾಣಿ ಕಲಾವಿದ ಎನ್.ಕೆ.ಶ್ರೀನಿವಾಸ್, ವಕೀಲ ಎಸ್.ಪ್ರಕಾಶ್, ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಬಾಲರಾಜ್ ಬಿ.ಉಪ್ಪಲ, ತಾಲ್ಲೂಕು ಅಧ್ಯಕ್ಷ ಎನ್.ರಂಗಸ್ವಾಮಿ ಭಾಗವಹಿಸುವರು.

ಸವಿತಾ ಸಮಾಜವು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ಕಡಿಮೆ ಜನಸಂಖ್ಯೆಯ ಅಸಂಘಟಿತ ಜನಾಂಗವಾಗಿದೆ. ನಮಗೆ ಸರ್ಕಾರದಿಂದ ಸಿಗಬೇಕಾದ ಸವಲತ್ತುಗಳು ದೊರೆಯುತ್ತಿಲ್ಲ. ಆದ್ದರಿಂದ ಸರ್ಕಾರವು ನಮ್ಮ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕು. ಕಟ್ಟಡ ಕಾರ್ಮಿಕರಿಗೆ ನೀಡುತ್ತಿರುವ ಮಾದರಿಯಲ್ಲಿ ನಮಗೂ ಸೌಲಭ್ಯ ಕೊಡಬೇಕು. ಸವಿತಾ ಸಮಾಜದ ಅಭಿವೃದ್ಧಿ ನಿಗಮಕ್ಕೆ ಹೆಚ್ಚಿನ ಅನುದಾನ ನೀಡಬೇಕು. ಜಾತಿ ನಿಂದನೆ ಪದವನ್ನು ಬಳಸಿ ನಮಗೆ ಮಾನಸಿಕ ನೋವು ಉಂಟು ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಸಂಘದ ಅಧ್ಯಕ್ಷ ಪಿ.ಜಿ.ನಾಗರಾಜ್, ಕಾರ್ಯದರ್ಶಿ ಎನ್.ವಿ. ರಾಜೇಂದ್ರ ಕುಮಾರ್, ಖಜಾಂಚಿ ಪಿ.ನಾರಾಯಣಪ್ಪ, ಸಂಚಾಲಕ ಎನ್.ರಾಜು ಪತ್ರಿಕಾಗೋಷ್ಠಿಯಲ್ಲಿದ್ದರು.

# ಮಾನಸಿಕ ಖಿನ್ನತೆ : ರೋಗಿಗಳ ಚಿಕಿತ್ಸೆಗೆ 'ಮಾನಸಧಾರ' ಹಗಲು ಆರೈಕೆ ಕೇಂದ್ರ ಆರಂಭ



ದಾವಣಗೆರೆ, ಆ.8- ನಗರದ ಡಿ.ಸಿ.ಎಂ ಲೇಔಟ್‌ನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಕೇಂದ್ರ, ಭಾರತೀಯ ಕಲಾ, ಸಾಂಸ್ಕೃತಿಕ ಅಕಾಡೆಮಿ ಇವರ ಸಹಯೋಗದಲ್ಲಿ ನೂತನವಾಗಿ ಆರಂಭಿಸಿರುವ 'ಮಾನಸಧಾರ' ಸಮುದಾಯ, ಮಾನ ಸಿಕ ಹಗಲು ಆರೈಕೆ ಆರೋಗ್ಯ ಕೇಂದ್ರವನ್ನು ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಉದ್ಘಾಟಿಸಿದರು.

ಸರ್ಕಾರವು ಎಲ್ಲಾ ಹಂತದಲ್ಲೂ ಸೂಕ್ತ ಸಮಯದಲ್ಲಿ ಸೂಕ್ತ ಯೋಜನೆಗಳನ್ನು ಜಾರಿ ಮಾಡುತ್ತದೆ. ಅದರಲ್ಲೂ ಮಾನಸಿಕ ರೋಗದಿಂದ ಖಿನ್ನತೆಗೆ ಒಳಗಾದ ರೋಗಿಗಳಿಗೆ ಚಿಕಿತ್ಸೆ ನೀಡಿ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಕೆಲಸ ಮಾಡುತ್ತಿದೆ. ಮಾನಸಿಕ ಚೈತನ್ಯ, 'ಮಾನಸಧಾರ' ಎನ್ನುವ ಯೋಜನೆ ಮೂಲಕ ಪ್ರತಿ ವಾರ ಜಿಲ್ಲೆಯ ಒಂದೊಂದು ತಾಲ್ಲೂಕಿಗೆ ಭೇಟಿ ನೀಡುವ ಮೂಲಕ ಮಾನಸಿಕ ಆರೋಗ್ಯ ತಪಾಸಣೆ ಮಾಡಲಾಗುತ್ತದೆ. ಅಲ್ಲದೇ ಅವರ ಆರ್ಥಿಕ ಪರಿಸ್ಥಿತಿ ನೋಡಿಕೊಂಡು ಅವರಲ್ಲಿನ ಕೌಶಲ್ಯ ವೃದ್ದಿಪಡಿಸಲು ವಿವಿಧ ತರಬೇತಿ ನೀಡಲಾಗುತ್ತದೆ ಎಂದು ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಡಾ.ಚೆನ್ನಪ್ಪ ಮಾತನಾಡಿ, ಇಂದಿನ ದಿನಮಾನಗಳಲ್ಲಿ ಮಾನಸಿಕ ಮತ್ತು ದೈಹಿಕ ಆರೋಗ್ಯ ಅತಿಮುಖ್ಯ. ದೈಹಿಕವಾಗಿ ಸರಿ ಇದ್ದು ಮಾನಸಿಕವಾಗಿ ಸರಿ ಇಲ್ಲದಿದ್ದರೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ನಾಗರಾಜ, ಮನೋವೈದ್ಯ ಡಾ.ಸುದರ್ಶನ್, ಜಿಲ್ಲಾ ವಿಕಲಚೇತನರ ಅಧಿಕಾರಿ ಕೆ.ಕೆ.ಪ್ರಕಾಶ್, ಜಿಲ್ಲಾ ಮನೋವೈದ್ಯ ಡಾ.ಮರುಳಸಿದ್ದಪ್ಪ, ಜಿಲ್ಲಾ ಕುಷ್ಠರೋಗ ನಿವಾರಣಾ ಅಧಿಕಾರಿ ಡಾ.ಪಿ.ಡಿ.ಮುರುಳೀಧರ, ಮನೋವೈದ್ಯ ಡಾ.ಗಂಗಂ ಸಿದ್ದಾರೆಡ್ಡಿ, ಮನಶಾಸ್ತ್ರಜ್ಞ ಎಸ್. ವಿಜಯಕುಮಾರ್, ಸೈಕ್ಯಾಟ್ರಿಕ್ ಸೋಷಿಯಲ್ ವರ್ಕರ್ ಸಂತೋಷ್, ಭಾರತೀಯ ಕಲಾ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷರಾದ ಮಲ್ಲೇಶಪ್ಪ, ಕಾರ್ಯದರ್ಶಿ ಜಯಲಕ್ಷ್ಮಿ, ನಿರ್ದೇಶಕಿ ಟಿ. ದಿವ್ಯಾ, ಸೋಷಿಯಲ್ ವರ್ಕರ್ ಯೋಗೇಶ್ ಇತರರು ಇದ್ದರು.

# ನಗರದಲ್ಲಿ 11 ರಂದು ಸರ್ವಸಿದ್ಧಿ ವಿನಾಯಕ ದೇವಸ್ಥಾನದ ಉದ್ಘಾಟನೆ



ದಾವಣಗೆರೆ, ಆ.8- ಮಹಾನಗರ ಪಾಲಿಕೆಯ 15ನೇ ವಾರ್ಡಿನ ಶಂಕರ್ ವಿಹಾರ್ ಬಡಾವಣೆ ಬಿ ಬ್ಲಾಕ್‌ನಲ್ಲಿ ನೂತನವಾಗಿ ನಿರ್ಮಾಣವಾಗಿರುವ ಶ್ರೀ ಸರ್ವಸಿದ್ಧಿ ವಿನಾಯಕ ದೇವಸ್ಥಾನದ ಉದ್ಘಾಟನೆ ಮತ್ತು ಶಿಲಾ ಮೂರ್ತಿ ಸ್ಥಾಪನೆ' ಪ್ರಾಣ ಪ್ರತಿಷ್ಠಾಪನೆ ಸಮಾರಂಭವು ಇದೇ ದಿನಾಂಕ 11 ರ ಗುರುವಾರ ನಡೆಯಲಿದೆ.

ಅಂದು ಬೆಳಿಗ್ಗೆ 10.30 ಕ್ಕೆ ಪೂಜ್ಯರ ಅಮೃತ ಹಸ್ತದಿಂದ ಹೋಮ, ಪ್ರಾಣ ಪ್ರತಿಷ್ಠಾಪನೆ ಹಾಗೂ ಮಹಾ ಮಂಗಳಾರತಿಯೊಂದಿಗೆ ಶ್ರೀ ಸ್ವಾಮಿಯ ದಿವ್ಯ ದರ್ಶನವಾಗುವುದು. ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಡಾ. ಶ್ರೀ ವೀರೇಂದ್ರ ಹೆಗಡೆ, ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ (ಆವರಗೊಳ್ಳ) ವಹಿಸುವರು ಎಂದು ದೇವಸ್ಥಾನ ಸಮಿತಿ ಕಾರ್ಯದರ್ಶಿ ಬಿ.ಪಿ. ಹರೀಶ್ ತಿಳಿಸಿದ್ದಾರೆ.

ಶ್ರೀ ಸರ್ವಸಿದ್ಧಿ ವಿನಾಯಕ ದೇವಸ್ಥಾನದ ಅಧ್ಯಕ್ಷರೂ ಆಗಿರುವ ಅಂತರ ರಾಷ್ಟ್ರೀಯ ಪವರ್ ಲಿಫ್ಟರ್ ಎಂ. ಮಹೇಶ್ವರಯ್ಯ ಅಧ್ಯಕ್ಷತೆ ವಹಿಸುವರು. ಶಾಸಕ ಶಾಮನೂರು ಶಿವಶಂಕರಪ್ಪ, ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ನಗರಸಭೆ ಮಾಜಿ ಅಧ್ಯಕ್ಷ ಶಿವನಹಳ್ಳಿ ಆರ್. ರಮೇಶ್, 15ನೇ ವಾರ್ಡಿನ ನಗರಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಉಮೇಶ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಮಂಜುನಾಥ ಏಕಬೋಟೆ ಆಗಮಿಸುವರು. ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ್ ಉಪನ್ಯಾಸ ನೀಡುವರು ಎಂದು ಸಹ ಕಾರ್ಯದರ್ಶಿ ರಾಕೇಶ್ ಹಾದಿಮನಿ, ಖಜಾಂಚಿ ಹೆಚ್.ಡಿ. ಕರಿಬಸಪ್ಪ ತಿಳಿಸಿದ್ದಾರೆ.

ದಾನಿಗಳಾದ ಬೆಸ್ಕಾಂನ ಶ್ರೀಮತಿ ಇಂದ್ರಮ್ಮ, ರೈಲ್ವೆ ಇಲಾಖೆಯ ನಿವೃತ್ತ ಅಧಿಕಾರಿ ಟಿ. ವೆಂಕಟೇಶಪ್ಪ, ಗೋಲ್ಡ್ ಸ್ಮಿತ್ ರಘು ಪಾಲನ್‌ಕರ್, ಉಪ ವಿಭಾಗಾಧಿಕಾರಿ ಆರ್. ನಟರಾಜ್, ಹವ್ಯಾಕ ಸಂಘದ ಅಧ್ಯಕ್ಷರು, ಕೆಟಿಎನ್ ಫ್ಯಾಬ್ರಿಕೇಷನ್‌ನ ರಿಯಾಜ್, ಶೃತಿ ಮೋಟಾರ್ಸ್, ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ ಮಣಿ ಸರ್ಕಾರ್, ಹನುಮಂತಪ್ಪ (ಕ್ರಷರ್), ತಹಶೀಲ್ದಾರ್ ಮಂಜುನಾಥ್, ಪಿ. ಮಹಾದೇವಪ್ಪ (ರಿಯಲ್ ಎಸ್ಟೇಟ್), ಗುತ್ತಿಗೆದಾರ ಎಟಿಕೆ ರಮೇಶ್, ಉದ್ಯಮಿ ಶ್ರೀಧರ ಪಾಟೀಲ್, ಗುತ್ತಿಗೆದಾರ ಅರುಣ್ ಕುಮಾರ್ ಮತ್ತು ಇತರರನ್ನು ಸಮಾರಂಭದಲ್ಲಿ ಸನ್ಮಾನಿಸಲಾಗುತ್ತದೆ ಎಂದು ಉಪಾಧ್ಯಕ್ಷರುಗಳಾದ ಚಂದ್ರಪ್ಪ, ಕಲ್ಲಪ್ಪ ಅರಳಿ, ಟಿ.ವೆಂಕಟೇಶಪ್ಪ ತಿಳಿಸಿದ್ದಾರೆ.

# ಪಾಲಿಕೆಯಿಂದ ಕಲುಷಿತ ನೀರು ಪೂರೈಕೆ ನಗರದಲ್ಲಿ ಹೆಚ್ಚಿದ ಶೀತ, ಕೆಮ್ಮು, ಜ್ವರ



ದಾವಣಗೆರೆ, ಆ. 8 - ಮಹಾನಗರ ಪಾಲಿಕೆ ನಿರ್ಲಕ್ಷ್ಯದಿಂದ ಕಲುಷಿತ ನೀರು ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಲ್ಲಿ ಶೀತ, ಕೆಮ್ಮು, ಜ್ವರ ಕಾಣಿಸಿಕೊಳ್ಳುತ್ತಿವೆ ಎಂದು ನಗರ ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ .ಶೆಟ್ಟಿ ಆರೋಪಿಸಿದ್ದಾರೆ.

ಕಳೆದ ಎರಡು ಮೂರು ತಿಂಗಳಿಂದ ಮಳೆ ಆಗುತ್ತಿದ್ದು ಈ ಸಂಬಂಧ ಕೆರೆ ಮತ್ತು ನದಿಗಳಲ್ಲಿ ನೀರು ಕಲುಷಿತಗೊಂಡಿದ್ದು, ಮಹಾನಗರ ಪಾಲಿಕೆ ಈ ನೀರನ್ನು ಸಾರ್ವಜನಿಕರಿಗೆ ಶುದ್ದೀಕರಣಗೊಳಿಸದೆ ಪೂರೈಸುತ್ತಿದ್ದು ಇದರಿಂದ ರೋಗರುಜಿನಗಳು ಹೆಚ್ಚುತ್ತಿವೆ ಎಂದು ದೂರಿದ್ದಾರೆ.

ಮಹಾನಗರ ಪಾಲಿಕೆಯ ಅಧಿಕಾರಿಗಳು, ಪಾಲಿಕೆ ಬಿಜೆಪಿ ಸದಸ್ಯರು 40% ಕಮೀಷನ್ ಪಡೆಯುವ ನಿಟ್ಟಿನಲ್ಲಿ ಇದ್ದಾರೆ? ಪಾಲಿಕೆಯಲ್ಲಿ ಸಂಪೂರ್ಣ ಆಡಳಿತ ವೈಫಲ್ಯ ಹೊಂದಿದ್ದು, ಕನಿಷ್ಠ ಪಕ್ಷ ನಾಗರಿಕರಿಗೆ ಶುದ್ಧ ಕುಡಿಯುವ ನೀರನ್ನು ಪೂರೈಸಲು ಸಹ ವಿಫಲವಾಗಿದೆ ಎಂದು ಆರೋಪಿಸಿದ್ದಾರೆ.



# ಸಮರ ಸೇನೆಯಿಂದ ಭದ್ರಾ ಡ್ಯಾಂಗೆ ಬಾಗಿನ

ದಾವಣಗೆರೆ,ಆ.2- ಕನ್ನಡ ಸಮರ ಸೇನೆ ಯಿಂದ ಭದ್ರಾ ಡ್ಯಾಂಗೆ ಬಾಗಿನ ಅರ್ಪಿಸಲಾಯಿತು. ಸೇನೆ ರಾಜ್ಯಾಧ್ಯಕ್ಷರಾದ ಟಿ.ಎಂ. ದಾಕ್ಷಾಯಣಮ್ಮ ಮಲ್ಲಿಕಾರ್ಜುನಯ್ಯ, ರಾಜೇಶ್ವರಿ ಟಿ.ಎಂ. ಉಮೇಶ್, ಸಂಗೀತಾ ಆರ್.ಬಿ. ಪ್ರಕಾಶ್, ನಾಗರತ್ನ ಆನಂದ್, ದೀಪ ಟಿ.ಎಂ. ಜೀವರಾಜಯ್ಯ, ಮೇಘಾ ಶಾಂತಯ್ಯ, ಶಶಿಕಲಾ ರವೀಂದ್ರಯ್ಯ, ಅಂಬಿಕ ದೇವೇಂದ್ರಚಾರ್, ಮಮತ ಹನುಮಂತಪ್ಪ, ಸುಧಾ ಶಾಂತರಾಜ್, ಕಾವ್ಯ, ವಿಜಿ, ಸುಕನ್ಯಾ ಮತ್ತಿತರರು ಉಪಸ್ಥಿತರಿದ್ದರು.

**ಲಕ್ಷ್ಮಿ ಬಾಲಾಜಿ ಸಿಲ್ವರ್ ಫೋಟೋ ಫ್ರೇಮ್**

ಸರ್ವಾಲಂಕೃತ ದೇವರ ಪೋಟೋಗಳು ವರಮಹಾಲಕ್ಷ್ಮೀ ಪೂಜೆಗೆ ಗೌರಿ, ಗಣೇಶ, ಲಕ್ಷ್ಮಿ ಪೀಠ, ಲಕ್ಷ್ಮಿ ಮುಖ, ಸೀರೆ, ಅಲಂಕೃತ ಪೋಟೋಗಳು ದೊರೆಯುತ್ತವೆ.

ಶಿವ-ಪಾರ್ವತಿ, ಬಾಲಾಜಿ ಪದ್ಮಾವತಿ ಲೈಟೆನಿಂಗ್ ಫೋಟೋಗಳು, ಮ್ಯಾರೇಜ್ ಗಿಫ್ಟ್, ಪ್ಯೂರ್ ಸಿಲ್ವರ್ ಫೋಟೋ ರೂ. 150, 200, 360 ರೂ.ಗಳಲ್ಲಿ ದೊರೆಯುತ್ತವೆ. ಮದುವೆ ಹಾಗೂ ಇತರೆ ಶುಭ ಸಮಾರಂಭಗಳಿಗೆ ಗೃಹ ಪ್ರವೇಶ, ಸತ್ಯ ನಾರಾಯಣ ಪೂಜೆಗೆ ಸಿಲ್ವರ್ ಫೋಟೋ ದೊರೆಯುತ್ತವೆ. ದೇವರ ಹಾರ, ದೇವರ ಕಿರೀಟ, ಡಾಬೂ, ವಂಕಿ ದೊರೆಯುತ್ತವೆ.

#34 ಮುರುಘರಾಜೇಂದ್ರ ಕಾಂಪ್ಲೆಕ್ಸ್ ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ-2.
99451 59582

## ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ.

### ಸಾರ್ವಜನಿಕ ಮಾಹಿತಿಗಾಗಿ ದಾವಣಗೆರೆ ನಗರದ ವಾಯುವಿನ ಗುಣಮಟ್ಟ

| ಕ್ರ.ಸಂ. | ಮಾಲಿನ್ಯ ಕಾರಕಗಳು | ಸತತ ವಾಯು ಗುಣಮಟ್ಟ ಮಾಪನ ಕೇಂದ್ರ, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ | ಮಾನವ ಚಾಲಿತ ಮಾಪನ ಕೇಂದ್ರ, ಟ್ರಾಫಿಕ್ ಪೊಲೀಸ್ ಸ್ಟೇಷನ್ (ದಕ್ಷಿಣ), ಪಿ.ಬಿ. ರಸ್ತೆ, ದಾವಣಗೆರೆ. | | 24 ಗಂಟೆಗಳಿಗೆ ನಿಗದಿಪಡಿಸಿದ ಮಾನದಂಡ (μg/m³) |
|---|---|---|---|---|---|
| | | ಸರಾಸರಿ (ದಿನಾಂಕ : 01.08.2022 ರಿಂದ ದಿನಾಂಕ 07.08.2022ರವರೆಗೆ) | ದಿನಾಂಕ:01.08.2022 | ದಿನಾಂಕ :04.08.2022 | |
| 01 | PM-10 (μg/m³) | 12.06 | 125 | 129 | 100 |
| 02 | PM-2.5 (μg/m³) | 3.81 | NM | NM | 60 |
| 03 | $SO_2$ (μg/m³) | 4.39 | BDL | BDL | 80 |
| 04 | $NO_2$- (μg/m³) | 5.17 | BDL | BDL | 80 |
| 05 | AMMONIA (μg/m³) | 12.65 | 09 | 09 | 400 |

BDL-Below Detection Limit
NM-Not Monitored

ಸಹಿ/-
ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ಕರಾಮಾನಿ ಮಂಡಳಿ, ದಾವಣಗೆರೆ.





## ದೇವರಬೆಳಕೆರೆ ಡ್ಯಾಂ

ಕಳೆದ ಕೆಲವು ದಿನಗಳಿಂದ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಹರಿಹರ ತಾಲ್ಲೂಕಿನ ದೇವರಬೆಳಕೆರೆ ಪಿಕಪ್ ಡ್ಯಾಂನಲ್ಲಿ ನೀರಿನ ಹರಿವು ಹೆಚ್ಚಾಗಿದೆ. ಕ್ಯಾಮೆರಾದಲ್ಲಿ ಸೆರೆಯಾದ ಡ್ಯಾಂನ ವಿಹಂಗಮ ನೋಟ. ಡ್ಯಾಂನಿಂದ ಹೊರ ಹೋಗುತ್ತಿರುವ ನೀರಿನಲ್ಲಿ ಮೀನಿನ ಬೇಟೆಯಲ್ಲಿ ನಿರತರಾಗಿರುವುದು (ಬಲಚಿತ್ರ) ಹಿಡಿದಿರುವ ಮೀನು ತೋರಿಸುತ್ತಿರುವ ವ್ಯಕ್ತಿ (ಒಳಚಿತ್ರ)

*ಚಿತ್ರಗಳು: ರಫೀಕ್, ಜನತಾವಾಣಿ*

# 2ಎ ಮೀಸಲಾತಿ ನೀಡದಿದ್ದರೆ ಸಿಎಂ ಮನೆ ಮುಂದೆ ಧರಣಿ

ಹರಪನಹಳ್ಳಿ, ಆ.8- ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಇದೇ ದಿನಾಂಕ 22ರೊಳಗೆ 2ಎ ಮೀಸಲಾತಿ ಘೋಷಣೆ ಮಾಡಬೇಕು. ಇಲ್ಲದಿದ್ದಲ್ಲಿ ಮುಖ್ಯಮಂತ್ರಿಗಳ ಮನೆ ಮುಂದೆ ಧರಣಿ ನಡೆಸುವುದಾಗಿ ಕೂಡಲ ಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಸರ್ಕಾರಕ್ಕೆ ಗಡುವು ನೀಡಿದರು.

ಪಟ್ಟಣದ ನಟರಾಜ ಕಲಾಭವನದಲ್ಲಿ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ ಹರಪನಹಳ್ಳಿ ತಾಲ್ಲೂಕು ಘಟಕ ಆಯೋಜಿಸಿದ್ದ ವಿವಿಧ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಮಾತನಾಡಿದರು.

ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗಾಗಿ ಹಲವು ಹೋರಾಟಗಳ ಮೂಲಕ ಆಗ್ರಹಿಸಿದ್ದೇವೆ. ಇದಕ್ಕೆ ಪ್ರತಿಯಾಗಿ ಮುಖ್ಯಮಂತ್ರಿಗಳು ಈಗಾಗಲೇ ಮೂರು ಬಾರಿ ಭರವಸೆಯ ಮಾತುಗಳನ್ನು ನೀಡಿದ್ದನ್ನು ನಾವು ಸಹಿಸಿಕೊಂಡಿದ್ದೇವೆ. ಕೊಟ್ಟ ಮಾತಿನಂತೆ ಮೀಸಲಾತಿ ನೀಡಬೇಕು ಎಂದು ಒತ್ತಾಯಿಸಿದರು.

ಶಾಸಕ ಜಿ.ಕರುಣಾಕರ ರೆಡ್ಡಿ ಅವರು ಸರ್ಕಾರದ ಮುಂದಿನ ಅಧಿವೇಶನದಲ್ಲಿ ಎಲ್ಲಾ ಸಮುದಾಯದವರ ಮೀಸಲಾತಿಗಾಗಿ ಧ್ವನಿ ಎತ್ತಬೇಕು. ಈ ಭಾಗದ ಲಿಂಗಾಯತ ಪಂಚಮಸಾಲಿ ಸಮುದಾಯದ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ವಸತಿ ನಿಲಯ ನಿರ್ಮಾಣಕ್ಕೆ ಭೂಮಿ ನೀಡಬೇಕು. ಪಟ್ಟಣದ ಒಂದು ವೃತ್ತಕ್ಕೆ ವೀರರಾಣಿ ಚನ್ನಮ್ಮನವರ ಹೆಸರು ಇಡಲು ಕ್ರಮವಹಿಸಬೇಕು ಎಂದರು.



ಹರಪನಹಳ್ಳಿ ಕಾರ್ಯಕ್ರಮದಲ್ಲಿ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಎಚ್ಚರಿಕೆ

ಶಾಸಕ ಜಿ.ಕರುಣಾಕರ ರೆಡ್ಡಿ ಮಾತನಾಡಿ, ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ವಿಚಾರಕ್ಕೆ ಸಂಬಂಧಿಸಿದಂತೆ ಮುಂದಿನ ಅಧಿವೇಶನದಲ್ಲಿ ಧ್ವನಿ ಎತ್ತುವೆ. ಶಿಕ್ಷಣಕ್ಕೆ ಯಾವತ್ತು ನನ್ನ ಬೆಂಬಲ, ಸಹಕಾರ ಇದ್ದೇ ಇರುತ್ತದೆ ಎಂದು ತಿಳಿಸಿದರು. ತಾಲ್ಲೂಕಿನ ಈಗಾಗಲೇ ಎಲ್ಲಾ ಸಮುದಾಯಗಳಿಗೆ ಭೂಮಿ ನೀಡಿದಂತೆ ಲಿಂಗಾಯಿತ ಪಂಚಮಸಾಲಿ ಸಮುದಾಯಕ್ಕೆ ಭೂಮಿ ನೀಡಲು ಕ್ರಮ ವಹಿಸುವೆ. ಪಟ್ಟಣದ ಒಂದು ವೃತ್ತಕ್ಕೆ ಕಿತ್ತೂರು ರಾಣಿ ಚನ್ನಮ್ಮನ ಹೆಸರು ನಾಮಕರಣ ಮಾಡಲು ಸಂಬಂಧಿಸಿದ ಸ್ಥಳೀಯ ಅಧಿಕಾರಿಗಳೊಂದಿಗೆ ಚರ್ಚಿಸುವು ದಾಗಿ ಭರವಸೆ ನೀಡಿದರು.

ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಮಾತನಾಡಿ, ಲಿಂಗಾಯತ ಪಂಚಮಸಾಲಿಗೆ 2ಎ ಮೀಸಲಾತಿ ಹೋರಾಟದ ಮೂಲಕವೇ ಸೌಲಭ್ಯವನ್ನು ಪಡೆಯಬೇಕೇ ಹೊರತು, ಎಲ್ಲೋ ಕುಳಿತು ಮನವಿ ಸಲ್ಲಿಸಿದರೆ ಪಡೆಯಲು ಸಾಧ್ಯವಿಲ್ಲ ಎಂದರು.

ಹಡಗಲಿ ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ಜಿಲ್ಲಾಧ್ಯಕ್ಷ ಚಂದ್ರಶೇಖರ್ ಭದ್ರವಾಡಿ ಮಾತನಾಡಿದರು.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾದ ತಾಲ್ಲೂಕು ಗೌರವ ಅಧ್ಯಕ್ಷ ಎ.ವೀರಣ್ಣ, ಮುಖಂಡರಾದ ಮಲ್ಕಪ್ಪ ಅಧಿಕಾರ, ಅರಸಿಕೇರಿ ಎನ್. ಕೊಟ್ರೇಶ್, ಶಶಿಧರ ಪೂಜಾರ, ಎಂ.ಟಿ. ಸುಭಾಶ್‌ಚಂದ್ರ, ಐಗೋಳ ಚಿದಾನಂದಪ್ಪ, ಚಂದ್ರಶೇಖರ ಪೂಜಾರ, ಪುಷ್ಪ ದಿವಾಕರ, ಮೈಸೂರು ಭರ್ಮಪ್ಪ, ಗುರುರಾಜ ತೆಲಿಗಿ, ಮಹೇಶ ಪೂಜಾರ, ಎನ್.ಜಿ.ಮನೋಹರ, ಹರಿಹರ ಹಾಲನಗೌಡ್ರು, ಮಲ್ಲಿಕಾರ್ಜುನ ಹಿರೇಕೊಪ್ಪ, ಸೇರಿದಂತೆ ಇತರರು ಇದ್ದರು.

# ವಿದ್ಯುತ್ ತಿದ್ದುಪಡಿ ಮಸೂದೆ ಮಂಡನೆ

ನವದೆಹಲಿ, ಆ. 8 – ವಿದ್ಯುತ್ ವಿತರಣಾ ಜಾಲದಲ್ಲಿ ಹಲವಾರು ಕಂಪನಿಗಳಿಗೆ ಅವಕಾಶ ನೀಡುವ ವಿದ್ಯುತ್ ತಿದ್ದುಪಡಿ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲಾಗಿದೆ.

ಕೇಂದ್ರ ವಿದ್ಯುತ್ ಸಚಿವ ಆರ್.ಕೆ. ಸಿಂಗ್ ಅವರು ಮಸೂದೆ ಮಂಡಿಸಿದ್ದಾರೆ. ಈ ಮಸೂದೆಗೆ ಪ್ರತಿಪಕ್ಷಗಳು ತೀವ್ರವಾಗಿ ವಿರೋಧಿಸಿವೆ. ಮಸೂದೆ ಕುರಿತು ವ್ಯಾಪಕ ಚರ್ಚೆಗಾಗಿ ಅದನ್ನು ಸಂಸತ್ತಿನ ಸ್ಥಾಯಿ ಸಮಿತಿಯ ಪರಿಶೀಲನೆಗೆ ವಹಿಸಬೇಕೆಂದು ಸ್ಪೀಕರ್ ಓಂ ಬಿರ್ಲಾ ಅವರಿಗೆ ಸಚಿವ ಸಿಂಗ್ ಮನವಿ ಮಾಡಿಕೊಂಡಿದ್ದಾರೆ.

ಈ ಮಸೂದೆಯಿಂದ ರಾಜ್ಯಗಳ ಹಕ್ಕುಗಳ ಉಲ್ಲಂಘನೆಯಾಗಲಿದೆ ಎಂದು ಪ್ರತಿಪಕ್ಷಗಳ ಸಂಸದರು ಆಕ್ಷೇಪಿಸಿದ್ದಾರೆ. ಟೆಲಿಕಾಂ ವಿದ್ಯುತ್ ಮಾರ್ಗಗಳಲ್ಲಿ ಖಾಸಗೀಕರಣಕ್ಕೆ ಮಸೂದೆ ಅವಕಾಶ ಮಾಡಿಕೊಡಲಿದೆ. ಇದರಿಂದಾಗಿ ಗ್ರಾಹಕರು ತಮಗೆ ಇಷ್ಟವಾದ ಪೂರೈಕೆದಾರರನ್ನು ಆಯ್ಕೆ ಮಾಡಿಕೊಳ್ಳಬಹುದು. ಟೆಲಿಫೋನ್, ಮೊಬೈಲ್ ಹಾಗೂ ಇಂಟರ್‌ನೆಟ್ ಸೇವೆಯ ರೀತಿಯಲ್ಲೇ ವಿದ್ಯುತ್ ವಿತರಣೆಯಲ್ಲೂ ಗ್ರಾಹಕರಿಗೆ ಆಯ್ಕೆ ಸಿಗಲಿದೆ.

ಮಸೂದೆಯ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ ಎಂದಿರುವ ಸಿಂಗ್, ಮಸೂದೆ ಜಾರಿಗೆ ಬಂದ ನಂತರವೂ ರೈತರಿಗೆ ಉಚಿತ ವಿದ್ಯುತ್ ಮುಂದುವರೆಯಲಿದೆ. ಸಬ್ಸಿಡಿ ವಾಪಸ್ ಪಡೆಯುವ ಯಾವುದೇ ಯೋಚನೆ ಇಲ್ಲ ಎಂದು ಹೇಳಿದ್ದಾರೆ.

## ಗತಿ ಶಕ್ತಿ ವಿದ್ಯಾಲಯ ಮಸೂದೆಗೆ ಸಂಸತ್ತಿನ ಒಪ್ಪಿಗೆ

ನವದೆಹಲಿ, ಆ. 8 – ರಾಷ್ಟ್ರೀಯ ರೈಲು ಹಾಗೂ ಸಾರಿಗೆ ವಿಶ್ವವಿದ್ಯಾನಿಲಯವನ್ನು ಸ್ವಾಯತ್ತ ಕೇಂದ್ರೀಯ ಸಂಸ್ಥೆಯಾಗಿ ಪರಿವರ್ತಿಸಿ ಗತಿ ಶಕ್ತಿ ವಿಶ್ವವಿದ್ಯಾಲಯ ಎಂಬ ಹೆಸರಿಡುವ ಮಸೂದೆಗೆ ಸಂಸತ್ತು ಒಪ್ಪಿಗೆ ನೀಡಿದೆ. ಕೇಂದ್ರ ವಿಶ್ವವಿದ್ಯಾನಿಲಯಗಳ ತಿದ್ದುಪಡಿ ಮಸೂದೆಯ ಮೂಲಕ ವಿಶ್ವವಿದ್ಯಾನಿಲಯದ ವ್ಯಾಪ್ತಿಯನ್ನು ರೈಲ್ವೆಗೆ ಮೀರಿ ಇಡೀ ಸಾರಿಗೆ ವಲಯಕ್ಕೆ ವಿಸ್ತರಿಸಲು ಉದ್ದೇಶಿಸಲಾಗಿದೆ. ಅಲ್ಪಕಾಲದ ಚರ್ಚೆಯ ನಂತರ ರಾಜ್ಯಸಭೆ ಮಸೂದೆಗೆ ಒಪ್ಪಿಗೆ ನೀಡಿದೆ. ಕಳೆದ ವಾರ ಲೋಕಸಭೆ ಮಸೂದೆಗೆ ಒಪ್ಪಿಗೆ ನೀಡಿತ್ತು.

## ಸಚಿವರಿಗಾಗಿ ಆಂಬ್ಯುಲೆನ್ಸ್‌ಗೆ ತಡೆ

ಚೆನ್ನೈ, ಆ. 8 – ಸಚಿವರೊಬ್ಬರ ಬೆಂಗಾವಲು ವಾಹನಗಳಿಗಾಗಿ ಆಂಬ್ಯುಲೆನ್ಸ್ ಅನ್ನೇ ತಡೆದ ಘಟನೆ ತಮಿಳುನಾಡಿನ ಕುಂಭಕೋಣಂನಲ್ಲಿ ನಡೆದಿದೆ. ಪೊಲೀಸ್ ಪೇದೆಯೊಬ್ಬರು ಸೈರನ್ ಮೊಳಗಿಸುತ್ತಿದ್ದ ಆಂಬುಲೆನ್ಸ್ ಅನ್ನು ಕೆಲ ನಿಮಿಷಗಳ ಕಾಲ ತಡೆದ ವಿಡಿಯೋ ವೈರಲ್ ಆಗಿದೆ. ಶಿಕ್ಷಣ ಸಚಿವ ಅಂಬಿಲ್ ಮಹೇಶ್ ಅವರು ಪ್ರಯಾಣಿಸುತ್ತಿದ್ದ ವಾಹನಕ್ಕಾಗಿ ಆಂಬ್ಯುಲೆನ್ಸ್ ತಡೆಯಲಾಗಿದೆ.


ದ್ವೈವಾರ್ಷಿಕ ಸ್ಮರಣಾರಾಧನೆ




ಲಿಂ. ಶ್ರೀ ಭರಮಜ್ಜರ ನಾಗರಾಜಪ್ಪನವರು, ದೊಡ್ಡಬಾತಿ

ಲಿಂಗೈಕ್ಯ : 09.08.2020

ಪ್ರಭಾವನೆ ಕಮರದ, ವ್ಯಕ್ತಿತ್ವ ಜೀವಚ್ಛವವಾಗದ, ಅರುಂಧತಿ ನಕ್ಷತ್ರದಂತೆ ದೂರ ಸರಿದರೂ ಸಾಮೀಪ್ಯರಾಗಿ
ವಿದಾಯದ ಗೇಹ ವಿಸ್ಮಯವಾಗಿ, ಅಸ್ಮಿತೆಯ ಬಾಳಿಗೆ ಸ್ಮಿತತ್ವವನ್ನೆರಕಹೊಯ್ದು,
ಶೀಲಚಾರಿತ್ರ್ಯಗಳಿಗೊಪ್ಪುವಂತೆ ಬಾಳಿದ, ಅಸೀಮ ಆತ್ಮಶಕ್ತಿಯನ್ನು ಹೊಂದಿದ,
ನಮ್ಮ ನೆನಸಿನಲ್ಲಿ ಚಿರನೂತನವಾಗುಳಿದ ವರ್ಣರಂಜಿತ ವ್ಯಕ್ತಾತ್ಮಕ್ಕೆ ಸುಶಾಂತಿಯನ್ನು ನಿವೇದಿಸುವ,

ಶ್ರೀಮತಿ ಎಂ.ಎಸ್. ನಾಗಮ್ಮ ದಿ|| ಬಿ. ನಾಗರಾಜಪ್ಪ
ಶ್ರೀ ಎನ್.ಎಸ್. ಪಾಟೀಲ್ (ಗುರು), ಶ್ರೀಮತಿ ಪ್ರೀತಿ ಬಿ. ಮತ್ತು ಕವೀನ್
ಶ್ರೀಮತಿ ಬಿ.ಎನ್. ಸುಮಾ ಶ್ರೀ ಹರ್ಷ ಬಿ.ಎಂ. ಮತ್ತು ಹಿತಾಶ್
ಪ್ರೊ|| ಬಾತಿ ಬಸವರಾಜ್, ಶ್ರೀಮತಿ ಕೆ.ಜಿ. ಕಮಲಾಕ್ಷಿ ಕುಟುಂಬದವರು
ಶ್ರೀಮತಿ ಎಸ್. ಲೀಲಾವತಿ ದಿ|| ಬಿ. ಗಿರಿರಾಜ್ ಕುಟುಂಬದವರು
ದೊಡ್ಡಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte